ಐಕ್ಯರಂಗ

ವಾರಪತ್ರಿಕೆ

[ಭಾ]ರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

[ಸಂ]ಪುಟ 10 ಸಂಚಿಕೆ 1 ಜನವರಿ 3, 1988 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಅತಿ ಪ್ರಸರಣ ಹೆಚ್ಚಿಸಿ ಜನಜೀವನವನ್ನು ಅಧೋಗತಿ ಗಿಳಿಸುವ

ರಾಜೀವ್ ಗಾಂಧಿ ಸರ್ಕಾರದ ಬೆಲೆಯೇರಿಕೆ ನೀತಿಯ ಖಂಡನೆ

ಮುಂಗಡ ಪತ್ರದ ಖೋತಾ ತುಂಬುವ ಸಲುವಾಗಿ ಸಂಪನ್ಮೂಲ ರೂಢಿಸುವ ಉದ್ದೇಶದಿಂದ ರಾಜೀವ್ ಗಾಂಧಿ ಸರ್ಕಾರ ಜನ ಜೀವನಕ್ಕೆ ಅತ್ಯಾವಶ್ಯಕವಾದ ಪಡಿತರ ಸಕ್ಕರೆ, ಖಾದ್ಯ ತೈಲ, ಮತ್ತು ಕಲ್ಲಿದ್ದಲಿನ ಬೆಲೆಯನ್ನು ಡಿ. 23ರಂದು ಹೆಚ್ಚಿಸಿದೆ. ಸಕ್ಕರೆಯ ಬೆಲೆಯನ್ನು 4.85 ಪೈಸೆಯಿಂದ 5.10 ಪೈಸೆಗೆ ಏರಿಸಲಾಗಿದೆ. ಆಮದು ಮಾಡಿರುವ ಪಾಮ್ ಎಣ್ಣೆಯ ಬೆಲೆಯನ್ನು ಟನ್‌ಗೆ ರೂ. 300 ರಷ್ಟು ಹೆಚ್ಚಿಸಿದೆ. ಈ ಹೆಚ್ಚಳ[ದಿಂ]ದಾಗಿ ಸರ್ಕಾರಕ್ಕೆ ಪ್ರತಿ ವರ್ಷ [ರೂ]. 1100ಕೋಟಿ ಲಾಭ ಸಿಗುತ್ತದೆ. ಕಲ್ಲಿದ್ದಲ ಬೆಲೆಯನ್ನು ಟನ್ನಿಗೆ ರೂ.29 [ರ]ಷ್ಟು ಹೆಚ್ಚಿಸಲಾಗಿದೆ. ಉಕ್ಕಿನ ಬೆಲೆಯನ್ನು ಶೇ. 18ರಷ್ಟು ಹೆಚ್ಚಿಸಿದೆ. ಈಗ ಪೆಟ್ರೋಲಿಯಂ ಬೆಲೆಯನ್ನು ಹೆಚ್ಚಿಸುವ ಯೋಜನೆಯಲ್ಲಿದೆ.

1986 ಜನವರಿಯಲ್ಲಿ ಪೆಟ್ರೋಲ್ ಬೆಲೆ ಹೆಚ್ಚಿಸಿದ ಪರಿಣಾಮವಾಗಿ ಕೇಂದ್ರ ಸರ್ಕಾರಕ್ಕೆ ಸುಮಾರು 800 ಕೋಟಿ ರೂ. ಹೆಚ್ಚುವರಿ ಆದಾಯ ಲಭ್ಯವಾಗಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್ಲಿಗೆ 14.5 ಡಾಲರ್ ಕಡಿಮೆಯಾಗಿದ್ದರೂ ಪೆಟ್ರೋಲ್‌ಬಳಕೆಯನ್ನು ನಿಯಂತ್ರಿಸುವ ಅಸಂಬದ್ಧ ನೆವ ಮುಂದು ಮಾಡಿ ಬೆಲೆ ಹೆಚ್ಚಿಸುವ ಕುತಂತ್ರ ನಡೆಸಲಾಗುತ್ತಿದೆ.

ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮುಂಗಡ ಪತ್ರ ಮಂಡಿಸುವ ಪೂರ್ವದಲ್ಲಿ ಆ ಮುಂಗಡ ಪತ್ರದ ಮೂಲಕ ಹೊಸ ಕರಭಾರವನ್ನು ಜನರ ಮೇಲೆ ಹೇರುವ ಮುಂಚೆಯೇ, ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಪ್ರತಿರೋಧವನ್ನು ಕುಂಠಿತ ಗೊಳಿಸುವುದಕ್ಕಾಗಿ, ನವಂಬರ್-ಡಿಸೆಂಬರ್ ತಿಂಗಳುಗಳಲ್ಲೇ ಉಕ್ಕು, ಎಣ್ಣೆ, ಸಕ್ಕರೆ, ಕಲ್ಲಿದ್ದಲು, ಪೆಟ್ರೋಲ್‌ಗಳ ಬೆಲೆ ಹೆಚ್ಚಿಸುವ ಆಡಳಿತಾತ್ಮಕ ಕ್ರಮ ಕೊಳ್ಳುವ ಪರಿಪಾಠವನ್ನು ಹಾಕಿಕೊಂಡಿದೆ. ಇಂದಿರಾ ಗಾಂಧಿ ಅಂಥ ಕ್ರಮ ಅನುಸರಿಸುತ್ತಿದ್ದು ರಾಜೀವ್ ಗಾಂಧಿ ಕೂಡ ಅದೇ ದಾರಿಯಲ್ಲಿ ಮುಂದುವರಿದಿದ್ದಾರೆ. ತಾನೇ ಬೆಲೆ ಹೆಚ್ಚಿಸುವ ಸರ್ಕಾರದ ಕ್ರಮ ಖಾಸಗೀ ಬಂಡವಾಳದಾರರಿಗೆ, ವ್ಯಾಪಾರಸ್ಥರಿಗೆ ಮನ ಬಂದಂತೆ ಬೆಲೆ ಹೆಚ್ಚಿಸಿ ಲಾಭ ಗಳಿಸಲು ಕುಮ್ಮಕ್ಕು ಕೊಟ್ಟಂತಾಗಿದೆ. ಉಕ್ಕು, ಕಲ್ಲಿದ್ದಲು, ಪೆಟ್ರೋಲಿನ ಬೆಲೆ ಹೆಚ್ಚಳ ಎಲ್ಲಾ ವಸ್ತುಗಳ ಮೇಲೆ ಪರಿಣಾಮ ಬೀರುತ್ತದೆ. ಒಂದೆಡೆ ಜನ ಜೀವನದ ಮೇಲೆ ಹೊಸ ಹೊರೆ ಹೇರುತ್ತಿರುವಾಗಲೇ ಅದು ಅತಿ ಪ್ರಸರಣಕ್ಕೆ ಎಡೆ ಮಾಡಿ ಕೊಟ್ಟು ದೇಶದ ಆರ್ಥಿಕತೆಯೇ ಕುಸಿಯುವಂತೆ ಮಾಡುತ್ತದೆ. ರೂಪಾಯಿಯ ಬೆಲೆ 10 ಪೈಸೆಗಿಂತಲೂ ಕೆಳ ಮಟ್ಟಕ್ಕೆ ಕುಸಿದಿದೆಂದು ಸರ್ಕಾರವೇ ಒಪ್ಪಿಕೊಂಡಿದೆ. ಪೆಟ್ರೋಲ್, ಉಕ್ಕು ಕಲ್ಲಿದ್ದಲುಗಳ ಬೆಲೆ ಹೆಚ್ಚಳ, ದೇಶದ ಎಲ್ಲಾ ಕೈಗಾರಿಕೆಗಳ ಮೇಲೂ, ಅವುಗಳಲ್ಲಾಗುವ ಉತ್ಪಾದಿತ ವಸ್ತುಗಳ ಮೇಲೂ ಸಂಚಾರದ ಮೇಲೂ ಪರಿಣಾಮ ಬೀರುತ್ತದೆ. ಅವುಗಳ ಬೆಲೆ ಹೆಚ್ಚಿಸುತ್ತದೆ.

ರಾಜೀವ ಸರ್ಕಾರ ಈ ರೀತಿ ಬೆಲೆ ಹೆಚ್ಚಿಸುತ್ತಿರುವುದನ್ನು ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿ ಹಾಗೆಯೇ ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ರಾಜೀವ್ ಸರ್ಕಾರದ ಬೆಲೆ ಹೆಚ್ಚಳ ನೀತಿಯನ್ನು ಎಲ್ಲಾ ವರ್ಗದ ಜನತೆ ವಿರೋಧಿಸಬೇಕೆಂದೂ ಸಂಯುಕ್ತ ಚಳುವಳಿ ಹೂಡಬೇಕೆಂದೂ ಕರೆ ಕೊಡುತ್ತದೆ.

ಹೊಸವರ್ಷದ ಶುಭಾಶಯಗಳು

ಕರ್ನಾಟಕದ ಜನತೆಗೆ ಐಕ್ಯರಂಗ ತನ್ನ ಶುಭಾಶಯಗಳನ್ನು ಸಲ್ಲಿಸುತ್ತದೆ. ಜನತೆ ಜಾಗೃತರಾಗಿ ಜನಾಭಿಪ್ರಾಯವನ್ನು ಮೂಡಿಸಿದ್ದೇ ಆದರೆ ಅಮೇರಿಕದ ಅಧ್ಯಕ್ಷ ರೇಗನ್‌ರ ಯುದ್ಧ ಪಿಪಾಸೆಯನ್ನು ಸಮರ್ಥನೀಯವಾಗಿ ಎದುರಿಸಲು ಸಾಧ್ಯವಿದೆಂಬುದನ್ನು ಇತ್ತೀಚೆಗೆ ವಾಶಿಂಗ್‌ಟನ್‌ನಲ್ಲಾದ ಮೈಖೆಲ್ ಗ್ರೋರ್ಬಚೇವ್ ಮತ್ತು ರೇಗನ್ ಅವರೊಳಗಾದ ಒಪ್ಪಂದ ತೋರಿಸಿಕೊಟ್ಟಿದೆ. ಭಾರತ ದೇಶದ ಎಡ ಪಕ್ಷಗಳೆಲ್ಲ ಒಟ್ಟಾಗಿ ತಮ್ಮ ಮುಖಂಡತ್ವದಲ್ಲಿ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ಆಂದೋಲನ ನಡೆಸಿದರೆ ಜನ ವಿರೋಧಿ ರಾಜೀವಗಾಂಧಿ ಸರಕಾರದ ವಿರುದ್ಧ ಸಮರ ಹೂಡಲು ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳನ್ನೆಲ್ಲ ಒಂದು ವೇದಿಕೆಯಡಿಯಲ್ಲಿ ತರಲು ಸಾಧ್ಯವಿದೆಂಬ ಅಂಶ ಇತ್ತೀಚೆಗೆ ಸಂಘಟಿಸಲ್ಪಟ್ಟ ಆರು ಬೃಹತ್ ಜಾಥಾ, ಹಲವಾರು ಉಪ ಜಾಥಾ ಮತ್ತು ದಿಲ್ಲಿಯ ಚರಿತ್ರಾರ್ಹ ಮತಪ್ರದರ್ಶನ ತೋರಿಸಿಕೊಟ್ಟಿವೆ.

ಕರ್ನಾಟಕದಲ್ಲಿ ಕೂಡ 1987ರಲ್ಲಿ ಸಿ.ಪಿ.ಐ.[ಎಂ] ರೈತ-ಕಾರ್ಮಿಕ ವಿದ್ಯಾರ್ಥಿ-ಯುವಜನ ಸಂಘಟನೆಗಳ ನೇತೃತ್ವದಲ್ಲಿ ಹಲವಾರು ಹೋರಾಟ ನಡೆಸಿದೆ. ಜನತೆ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಸಂಯುಕ್ತ ಚಳುವಳಿ ನಡೆಸಲು ಕರ್ನಾಟಕದಲ್ಲಿ ಸಾಕಷ್ಟು ಅವಕಾಶಗಳಿವೆ. ಕಾಂಗ್ರೆ, ಜನತಾಗಳ ಆಡಳಿತೆ-ಕಾರ್ಯ ವಿಧಾನಗಳಿಗೆ ಬೇಸತ್ತ ಜನತೆ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳತ್ತ ಗಮನ ಹರಿಸಿದ್ದಾರೆ. ಅವರ ಆಶೋತ್ತರಗಳನ್ನು ಅರ್ಥೈಸಿಕೊಂಡು ಕರ್ನಾಟಕದಲ್ಲಿಯೂ ಎಡ, ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳು ಪರ್ಯಾಯ ಶಕ್ತಿಯಾಗಿ ಬೆಳೆದು ಬರುವಂತೆ ಸಿ. ಪಿ. ಐ. (ಎಂ)—ಸಿ. ಪಿ. ಐ. ಪಕ್ಷಗಳೂ ನಿರಂತರ ಪ್ರಯತ್ನ ನಡೆಸುವುದು ಅತ್ಯಗತ್ಯ. ಆ ಪಕ್ಷಗಳ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳು ಆ ರೀತಿಯ ಪ್ರಯತ್ನ ನಡೆಯುತ್ತವೆಂದು ಆಶಿಸೋಣ. ಅಂಥ ಪ್ರಯತ್ನ ನಡೆಸುವುದರಲ್ಲಿ ವಿಫಲರಾದರೆ ಚರಿತ್ರೆ ಕಾರ್ಮಿಕ ವರ್ಗದ ಮೇಲೆ ಹೊರಿಸಿದ ಕರ್ತವ್ಯ ಪಾಲನೆಯಲ್ಲಿ ಚ್ಯುತಿ ಉಂಟಾಗುವುದರಲ್ಲಿ ಸಂಶಯವಿಲ್ಲ. ಎಡ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆಗೆ ಐಕ್ಯರಂಗ ಶಕ್ತಿಮೀರಿ ಸಹಾಯ ಮಾಡುತ್ತದೆಂಬ ಆಶ್ವಾಸನೆ ನೀಡುತ್ತೇವೆ.

ಎನ್. ಕೆ. ಉಪಾಧ್ಯಾಯ
ಸಂಪಾದಕ ಮಂಡಳಿ ಪರವಾಗಿ

ಫೇರ್‌ಫ್ಯಾಕ್ಸ್ ತನಿಖೆ: ಹಿನ್ನೆಲೆಯಲ್ಲಿರುವ ಪ್ರಶ್ನೆಗಳು

ಇ. ಎಂ. ಎಸ್ ನಂಬೂದಿರಿಪಾದ್

ಠಕ್ಕರ್-ನಟರಾಜನ್ ಆಯೋಗದ ಫೇರ್‌ಫ್ಯಾಕ್ಸ್ ವಿಚಾರಣೆಯ ವರದಿಯನ್ನು ದೇಶಾದ್ಯಂತ ಜನಜನಿತ ಗೊಳಿಸಬೇಕೆಂದು ಕಾಂಗ್ರೆಸ್ ಮುಖಂಡರು [ನಿ]ರ್ಧರಿಸಿದ್ದಾರಂತೆ. ವಿ.ಪಿ.ಸಿಂಗ್‌ರನ್ನು [ಅ]ವಮಾನ ಮಾಡಿರೆಂದು ಉತ್ತರ [ಪ್ರ]ದೇಶ ವಿಧಾನಸಭೆಯ ಸುವರ್ಣ ಮಹೋತ್ಸವ ಸಮಾರಂಭಕ್ಕೆ ಆಹ್ವಾನಿತರಾಗಿದ್ದ ಎಂ.ಪಿ.ಗಳು, ಎಂ.ಎಲ್.ಎ.ಗಳು ಹಾಗೂ ಮಾಜೀ ಎಂ.ಎಲ್.ಎ.ಗಳನ್ನು ಶ್ರೀಯುತಗುಲಾಂ ನಬೀ ಆಝಾದ್ ವಿನಂತಿಸಿಕೊಂಡರೆಂದು ಇಂಡಿಯನ್ ಎಕ್ಸ್‌ಪ್ರೆಸ್ [ವರ]ದಿ [ಮಾ]ಡಿದೆ.

ಶ್ರೀಯುತ ಸಿಂಗ್ [...] [...]ರ ಜತೆಗಾರರ ಭಿನ್ನಮತೀಯರೆಲ್ಲ ಅವಮಾನಗೊಳಿಸುವುದು ಅಗತ್ಯ ಎಂದುಹೇಳುತ್ತಾ, "ವಿ.ಪಿ.ಸಿಂಗ್ ಒಬ್ಬ ಕ್ರಿಮಿನಲ್, ಅರುಣ್ ನೆಹ್ರೂ ಕ್ರಿಮಿನಲ್‌ನ ಅಪ್ಪ. ಬ್ಲಾಕ್‌ನಿಂದಬ್ಲಾಕ್‌ಗೆ, ಜಿಲ್ಲೆಯಿಂದ ಜಿಲ್ಲೆಗೆ ಹೋಗಿ ಈ ವರದಿಯ ಅಂಶಗಳನ್ನು ರಾಜ್ಯಾದ್ಯಂತ ಪಸರಿಸಿ" ಎಂದು ಅವರು ಒತ್ತಿ ಹೇಳಿದರಂತೆ.

ಇವರು ಮತ್ತು ಕಾಂಗ್ರೆಸ್‌ನ ಇತರ ಮಹಾಶಯರು ಒಂದು ಸಂಗತಿಯನ್ನು ಮಾತ್ರ ಮರೆಯುತ್ತಾರೆ. ಅದೇನೆಂದರೆ ಈ "ಕ್ರಿಮಿನಲ್" ಹಾಗೂ "ಕ್ರಿಮಿನಲ್‌ನ ಅಪ್ಪ" ಕೆಲವೇ ತಿಂಗಳ [ಹಿ]ಂದಿನವರೆಗೆ ಅವರ ಗೌರವಾನ್ವಿತ ಸಹೋದ್ಯೋಗಿಗಳಾಗಿದ್ದರು. ಎಂಬುದು ಶ್ರೀಯುತ ಸಿಂಗ್ ಹಣಕಾಸು ಮಂತ್ರಿಯಾಗಿ ಸ್ವೇಚ್ಛೆಯಿಂದೇನೂ ವರ್ತಿಸುತ್ತಿರಲಿಲ್ಲ. ರಾಜೀವಗಾಂಧಿ ಮಂತ್ರಿಮಂಡಲದ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದರು. ಅವರ ಮುಖಂಡನಾಗಲೀ, ಅಥವಾ ಈಗ ಅವರನ್ನು 'ಅವಮಾನ' ಮಾಡಬೇಕೆನ್ನುವ ಇತರ ಸಹಯೋಗಿಗಳಾಗಲೀ ಆಗ ಅವರ ಧೋರಣೆಗಳಿಗೆ ಸವಾಲು ಹಾಕಿರಲಿಲ್ಲ.

ಅವರನ್ನು ಹಣಕಾಸು ಇಲಾಖೆ ತೆಗೆದದ್ದು ಆತ ತನ್ನ ಮುಖಂಡನಿಗೆ ಅಥವಾ ಮಂತ್ರಿ ಮಂಡಲಕ್ಕೆ ತದ್ವಿರುದ್ಧವಾದ ಧೋರಣೆ ಅನುಸರಿಸುತ್ತಿದ್ದರೆಂಬ ಕಾರಣಕ್ಕಲ್ಲ. ಆದ್ದರಿಂದಲೇ ತಾನೇ ಅವರಿಗೆ ಇನ್ನೊಂದು ಸೂಕ್ಷ್ಮ ಇಲಾಖೆಯನ್ನು ರಕ್ಷಣಾ ಇಲಾಖೆಯನ್ನು ವಹಿಸಿಕೊಟ್ಟದ್ದು! ಫೇರ್‌ಫ್ಯಾಕ್ಸ್

(8 ನೇ ಪುಟ ನೋಡಿ)

ಅದಮ್ಯ ಚೇತನ ಪಿ. ರಾಮಮೂರ್ತಿ

-ಬಿ. ಟಿ. ರಣದಿವೆ

ಬೆಂಕಿಯ ನಾಲಿಗೆಗಳು ಪಿ. ರಾಮಮೂರ್ತಿಯವರ ದೇಹವನ್ನು ನುಂಗಿ ನೊಣೆಯುತ್ತಿದ್ದಾಗ, ನಾನು ನನ್ನ ದುಃಖವನ್ನು ಉಪಶಮನ ಮಾಡಿಕೊಳ್ಳುವುದು ಬಹಳ ಕಷ್ಟವಾಯಿತು. ಕೊನೆಗೆ ಅವರ ಇಡೀ ಜೀವನವೇ ಜನತೆಗಾಗಿ ತನ್ನ ಜೀವದ ಸಾರವನ್ನೇ ಉರಿಸುತ್ತಿದ್ದ ಮೇಣದ ಬತ್ತಿಯಲ್ಲವೇ ಎಂದು ನನ್ನನ್ನೇ ನಾನು ಸಮಾಧಾನ ಮಾಡಿಕೊಂಡೆ. ಅವರ ನೆನಪಿಗೆ ವಂದನೆಗಳನ್ನು ಸಲ್ಲಿಸಿದೆ.

ಓ ! ನಮ್ಮ ಗೌರವಾನ್ವಿತ ಸಂಗಾತಿಯೇ ವಿಶ್ರಾಂತಿಯನ್ನು ಪಡೆ. ಈ ವಿಶ್ರಾಂತಿಯನ್ನು ನೀನು (ನಿನ್ನ ಅವಿರತವಾದ ದುಡಿಮೆಯಿಂದ) ಸಂಪಾದಿಸಿದ್ದೆ.

ಮಹಾನ್ ವೀರನೊಬ್ಬ ಅಗಲಿದ್ದಾನೆ ಆದರೆ ಅವನ ಕ್ರಾಂತಿಕಾರಿ ಕೆಲಸದ ನೆನಪನ್ನು ನಮಗೆ ಬಿಟ್ಟು ಹೋಗಿದ್ದಾನೆ. ಇಂದೊಂದು ಶ್ರೀಮಂತವಾದ ಆಸ್ತಿ. ಕಾಂ.ಪಿ. ಆರ್ ರವರ ನಿಧನದಿಂದ ಕಮ್ಯೂನಿಸ್ಟ್ ಚಳುವಳಿಯ ಮಹಾನ್ ಸಾಧಕನೊಬ್ಬನ ಜೀವನಕ್ಕೆ ಕೊನೆ ಹಾಡಿದಂತಾಗಿದೆ, ನಿರಂತರ ಹೋರಾಟದ, ತ್ಯಾಗದ, ಕ್ರೂರಹಿಂಸೆಗೆ, ಸೆರೆಮನೆ ವಾಸಕ್ಕೆ ಬಲಿಯಾದ ಜೀವನ ಅದು. ಆಳುವ ಅಧಿಕಾರಿಗಳೊಡನೆ ಮಾತ್ರವೇ ಅಲ್ಲ, ಪ್ರಜಾಪ್ರಭುತ್ವ ವಿರೋಧಿಯಾದ ಪಾಳೆಯಗಾರಿ ಪರಂಪರೆಗೆ ಸರಪಳಿಯಿಂದ ಕಟ್ಟಿ ಹಾಕಿಕೊಂಡ ಇಡೀ ಜನ ಸಮುದಾಯ ಹಿಂದಿನೆಲ್ಲಾ ಚರಿತ್ರೆಯೊಡನೆ ಸೆಣಸಿದ ಜೀವನ ಅದು. ಅವರ ಸಾವು ಪಕ್ಷಕ್ಕೆ ಹಾಗೂ ಕಮ್ಯುನಿಸ್ಟ್ ಚಳುವಳಿಗೆ ತುಂಬಿ ಲಾರದ ಹಾನಿ. ಅವರ ಜೀವನ ಹಿಂದಿನ ಕೆಲವು ದಶಕಗಳಲ್ಲಿ ಭಾರತದ ಜನತೆ ಹಾಗೂ ಕಾರ್ಮಿಕ ವರ್ಗ ಹಾದು ಬಂದ ಯುಗವೊಂದರ ಎಲ್ಲಾ ಮುಖ ಹಾಗೂ ಲಕ್ಷಣಗಳಿಂದ ತುಂಬಿತ್ತು. ಅವರ ಕಾಲದ ಸಾಮಾಜಿಕ, ರಾಜಕೀಯ ಹೋರಾಟಗಳ ಜೊತೆ ಬೆಳೆಯುತ್ತಾ ಅತ್ಯಂತ ದೂರ ದೃಷ್ಟಿಯುಳ್ಳ ದೃಢವಾದ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳ ಭಾಗವಾದರು. ಇದು ಅವರನ್ನು ಕಮ್ಯುನಿಸ್ಟ್ ಚಳುವಳಿಯೊಳಕ್ಕೆ ಸೆಳೆಯಿತು.

ಈ ಚಳುವಳಿಯೊಳಕ್ಕೆ ಬಂದ ಕೂಡಲೆ ತಮ್ಮ ಸ್ವಂತ ತೇಜಸ್ಸಿನಿಂದ, ತೀಕ್ಷ್ಣ ಬುದ್ಧಿ ಮತ್ತೆಯಿಂದ, ಮಾರ್ಕ್ಸ್‌ವಾದ ಲೆನಿನ್‌ವಾದದ ಮೇಲೆ ಅವರ ಹಿಡಿತದಿಂದ, ಅದಕ್ಕೆ ಅವರ ನಿಷ್ಠೆಯಿಂದ ಕಮ್ಯುನಿಸ್ಟ್ ಪಕ್ಷದಲ್ಲಿ ಅತ್ಯುನ್ನತ ಸ್ಥಾನವನ್ನು ತಲುಪಿದರು. ಐಕ್ಯ ಕಮ್ಯುನಿಸ್ಟ್ ಪಕ್ಷದಲ್ಲಿ ಬಹಳ ಕಾಲ ಕೇಂದ್ರ ಸಮಿತಿ ಹಾಗೂ ಕಾರ್ಯದರ್ಶಿ ಮಂಡಳಿಯಲ್ಲಿದ್ದರು. ಸಿ.ಪಿ.ಐ (ಎಂ)ನ ಕೇಂದ್ರ ಸಮಿತಿ ಹಾಗೂ ಪಾಲಿಟ್ ಬ್ಯೂರೋದ ಸದಸ್ಯತ್ವದ ಸ್ಥಾನಕ್ಕೇರಿದರು. ಕಾಂಗ್ರೆಸ್ ನಲ್ಲಿ ಸ್ವಯಂ ಸೇವಕನಾಗಿ ಸೇರಿದ ಯುವಕನೊಬ್ಬ, ಮಹಾತ್ಮ ಗಾಂಧಿಯವರ ತಮಿಳುನಾಡು ಪ್ರವಾಸದಲ್ಲಿ ಅವರನ್ನು ಎಲ್ಲಾಕಡೆಗೆ ಒಯ್ಯಲು ನೇಮಿತವಾದ ಕಾರ್ಯಕರ್ತನೊಬ್ಬ ಕಮ್ಯುನಿಸ್ಟ್ ಚಳುವಳಿಯ ಉನ್ನತ ಸ್ಥಾನಕ್ಕೇರಿದ ತನ್ನ ಹಿಂದಿನ ಸಂಗಾತಿಗಳ ವಿರುದ್ಧವೇ ಸೆಣಸಿದ ಅವರಿಂದ ಬಂಧನಕ್ಕೂ ಒಳಗಾದ.

ಸೈಮನ್ ಕಮಿಷನ್

1927ರಲ್ಲಿ ಸೈಮನ್ ಕಮಿಷನ್ ಭಾರತದಲ್ಲಿ ಪ್ರವಾಸ ಮಾಡುತ್ತಿದ್ದಾಗ ದರ ವಿರುದ್ಧ ಪ್ರತಿಭಟಿಸಲು ನಡೆದ ಕಾರ್ಮಿಕ ವರ್ಗದ ಮುಷ್ಕರ ಬ್ರಿಟಿಷ್ ಆಳರಸರಿಗೆ ನಡುಕವುಂಟು ಮಾಡಿದ ಒಂದು ಮುಖ್ಯರಾಜಕೀಯ ಘಟನೆ. ಆದರೆ ಇಡೀ ದಕ್ಷಿಣ ಈ ಹೊಚ್ಚ ಹೊಸ ಕಾರ್ಮಿಕ ವರ್ಗದ ಚೇತನದಿಂದ ಮಾರ್ಕ್ಸ್‌ವಾದದ ಆಕರ್ಷಣೆಯಿಂದ ದೂರವೇ ಉಳಿದಿತ್ತು. ಸೈಮನ್ ಬಹಿಷ್ಕಾರದಲ್ಲಿ ಕಾಂ.ರಾಮಮೂರ್ತಿಯವರು ಕಾಂಗ್ರೆಸ್ ಕಾರ್ಯಕರ್ತನಾಗಿ ಭಾಗವಹಿಸಿದರು.

1930–32ರ ನಾಗರೀಕ ಅಸಹಕಾರದ ಚಳುವಳಿ ನಂತರ ಅದನ್ನು ಹಿಂತೆಗೆದುಕೊಂಡದ್ದು ಪೂರ್ಣ ಸ್ವಾತಂತ್ರ್ಯಕ್ಕಾಗಿ ಯುವಕರು ಒತ್ತಾಯಿಸಿದಾಗ ಅದನ್ನು ಕಾಂಗ್ರೆಸ್ ಒಪ್ಪಿದರೂ ನಂತರ 1935ರ ಸರ್ವ ಖಂಡನೆಗೊಳಗಾದ ಸಂವಿಧಾನದಂತೆ ಮಂತ್ರಿ ಪದವಿ ಸ್ವೀಕರಿಸಿದ್ದು ಯುವಕರಿಗೆ ನಿರಾಸೆಯನ್ನುಂಟು ಮಾಡಿತು. ಮತ್ತೊಮ್ಮೆ ಹೊಸ ಸಿದ್ಧಾಂತ ಹೊಸ ದೃಷ್ಟಿಕೋನ, ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೊಸ ಕಾರ್ಯಕ್ರಮಕ್ಕಾಗಿ ಹುಡುಕಾಟ ಆರಂಭವಾಯಿತು.

ಆಗಿನ ವಾತಾವರಣ ಮೊತ್ತಮೊದಲ ಸೋವಿಯೆತ್ ಯೋಜನೆಯ ಯಶಸ್ಸಿನ ವಾರ್ತೆಯಿಂದ ದೀಪ್ತವಾಗಿತ್ತು. ಇದು ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪನೆಗೆ ಕಾರಣವಾಯಿತು. ಪಿ. ರಾಮಮೂರ್ತಿಯವರು ಈ ಅವಧಿಯಲ್ಲಿ ಸಮಾಜವಾದದ ಕಡೆಗೆ ತಿರುಗಿದರು. ತಮಿಳುನಾಡಿನ ಕಾಂಗ್ರೆಸ್ ಸಮಾಜವಾದಿ ಪಕ್ಷದ ಘಟಕದ ಸ್ಥಾಪನೆಗೆ ಕಾರಣರಾದರು.

ಈ ಹಂತದಲ್ಲಿ ಅವರು ಆಗ ಮದ್ರಾಸಿನಲ್ಲಿ ಭೂಗತರಾಗಿದ್ದ ಈಗ ಪಾಕಿಸ್ತಾನದಲ್ಲಿರುವ ಎಂದಿನಂತೆ ಅಲ್ಲಿ ಮಾರ್ಕ್ಸ್‌ವಾದಿ ಚಳುವಳಿಯಲ್ಲಿಯೇ ತೊಡಗಿಕೊಂಡಿರುವ ಕಾರ್ಮಿಕ ಕ್ರಾಂತಿಕಾರಿ ಅಮೀರ್ ಹೈದರ್ ಖಾನ್‌ರವರ ಸಂಪರ್ಕಕ್ಕೆ ಬಂದರು. 1934ರ ಅಖಿಲ ಭಾರತ ಗಿರಣಿ ಕಾರ್ಮಿಕರ ಮುಷ್ಕರದ ಯಶಸ್ಸಿನ ನಂತರ ಮದ್ರಾಸಿಗೆ ಗಡೀಪಾರು ಮಾಡಲ್ಪಟ್ಟಿದ್ದ ಎಸ್.ವಿ. ಘಾಟೆಯವರೂ ಕಾಂ.ರಾಮಮೂರ್ತಿಯವರ ಸಂಪರ್ಕಕ್ಕೆ ಬಂದ ಸಂಗಾತಿಗಳಲ್ಲೊಬ್ಬರು. ಈಗ ಪಿ.ರಾಮಮೂರ್ತಿಯವರು ಮಾರ್ಕ್ಸ್‌ವಾದದ ಕಡೆಗೆ ತಿರುಗಿದರು. ತಮ್ಮೆಲ್ಲಾ ಶಕ್ತಿಯನ್ನೂ ಕಾರ್ಮಿಕ ವರ್ಗದ ಚಳುವಳಿಯನ್ನು ಕಟ್ಟಲು ವಿಸ್ತರಿಸಲು ಮೀಸಲಿಟ್ಟರು.

ರಾಮಮೂರ್ತಿಯವರ ಬುದ್ಧಿಮತ್ತೆ ಮತ್ತು ಮೇರೆಯಿಲ್ಲದ ಶಕ್ತಿ ಸಾಮರ್ಥ್ಯಗಳು ಅವರೊಪ್ಪಿದ ಹಿಂದಿನ ಸಿದ್ಧಾಂತಗಳು ಹಿಡಿದಿಟ್ಟಿದ್ದವು. ಜನರ ಸೇವೆ, ಅವರ ವಿಮೋಚನೆ ಮತ್ತು ಕ್ರಾಂತಿಗಾಗಿ ದುಡಿಯುವುದಕ್ಕಾಗಿಯೇ ಕಾದಿದ್ದವು ಎಂಬಂತೆ ಕಾಣಿಸಿತು. ಅವರು ಅನೇಕ ಕಾರಖಾನೆಗಳಲ್ಲಿ ಮತ್ತು ನಗರಗಳಲ್ಲಿ, ಹತ್ತಿಗಿರಣಿ ಟ್ರಾಂವೇಸ್, ರೈಲ್ವೆ, ಸಾರಿಗೆಗಳಲ್ಲಿ–ಒಂದರ ನಂತರ ಒಂದರಂತೆ ಕಾರ್ಮಿಕ ಸಂಘಟನೆಯನ್ನು ಕಟ್ಟಿದರು. ಒಬ್ಬ ಆರಂಭ ಕಾಲದ ಕಾರ್ಯಕರ್ತನಾಗಿ ಬುಡಮಟ್ಟದಲ್ಲಿಯೂ ಕೆಲಸಮಾಡಬೇಕಾಗಿತ್ತು. ಶೀರ್ಘದಲ್ಲಿಯೇ ತಮಿಳುನಾಡಿನ ಅತ್ಯಂತ ದೊಡ್ಡ ಕಾರ್ಮಿಕ ನಾಯಕನಾಗಿ ಬೆಳೆದರು. ಆ ಅವಧಿಯ ಎಲ್ಲಾ ಪ್ರಮುಖ ಮುಷ್ಕರಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಭಾಗವಹಿಸಿದರು.

ಕಾರ್ಮಿಕ ಸಂಘಟನೆಯಲ್ಲಿ ಮಾತ್ರವಲ್ಲ

ಆದರೆ ಕಾರ್ಮಿಕ ಸಂಘಗಳಲ್ಲಿಯೇ ತೃಪ್ತಿಯಾಗುವವರಲ್ಲ ಅವರು. ಕಮ್ಯುನಿಸ್ಟ್ ನಾಯಕರಾಗಿ ಎಲ್ಲ ಸಾಮೂಹಿಕ ರಂಗಗಳ, ಸಂಘಟನೆಗಳನ್ನು ಸಂಘಟಿಸಿದವರು ಅವರು–ವಿದ್ಯಾರ್ಥಿಗಳ ರೈತರ, ಕೃಷಿ ಕಾರ್ಮಿಕರ ಸಂಘಟನೆಗಳನ್ನು ಕಟ್ಟಿದರು ಅವರು. ಹೊಸ ಸಂಗಾತಿಗಳಿಗೆ ಮಾರ್ಕ್ಸ್‌ವಾದ ಲೆನಿನ್‌ವಾದದ ಸಾರದಲ್ಲಿ ಶಿಕ್ಷಣ ನೀಡಿ ಅವರನ್ನು ತನ್ನ ಉದಾಹರಣೆಯನ್ನು ಅನುಸರಿಸಲು ಒಬ್ಬ ಪೂರ್ಣಕಾಲ ಕಾರ್ಯಕರ್ತನ ಕಠಿಣ ಜೀವನವನ್ನು ಒಪ್ಪಿಗೊಳ್ಳಲು ಸ್ಫೂರ್ತಿತುಂಬುತ್ತಿದ್ದರು. ತಮಿಳುನಾಡಿನಲ್ಲಿನ ಪಕ್ಷದ 'ಇಂದಿನ ನಾಯಕರನೇಕರು ಎಲ್ಲಾ ಕಾಲ, ಸಂದರ್ಭಗಳಲ್ಲಿ ಪಕ್ಷಕ್ಕಾಗಿ ದುಡಿಯಲು ಉತ್ತೇಜಿಸಿದವರು ಅವರು. ಪಿ·ರಾಮಮೂರ್ತಿಯವರಿಂದಲೇ ನೇರವಾಗಿ ಸ್ಫೂರ್ತಿ ಪಡೆದವರ ಸಂಖ್ಯೆಯೇ ನೂರಾರು ಪಕ್ಷದ ಇಂದಿನ ಉನ್ನತ ಮಟ್ಟದ ನಾಯಕರಲ್ಲಿಯೂ ಕೂಡ ಪಿ.ರಾಮಮೂರ್ತಿಯವರು ಅಸಾಧಾರಣ ಶಕ್ತಿ ಸಾಮರ್ಥ್ಯಗಳ ಸಂಗಾತಿ. ಬಹಳ ಅಪರೂಪವಾಗಿ ಮಾತ್ರವೇ ಒಬ್ಬ ಸಂಗಾತಿ ಪಕ್ಷದ ಎಲ್ಲಾ ರೂಪದ ಚಟುವಟಿಕೆಗಳಲ್ಲಿಯೂ ನಿಪುಣನಾಗಲು ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸಲು ಸಾಧ್ಯ. ಈ ವಿಷಯದಲ್ಲಿ ಪಿ.ಆರ್.ರವರನ್ನು ಸರಿಗಟ್ಟುವವರೇ ಇರಲಿಲ್ಲ.

ಅವರ ಸ್ಮರಣ ಶಕ್ತಿ ಅತ್ಯಂತ ಜಟಿಲ ಪ್ರಶ್ನೆಗಳನ್ನೂ ಶೀಘ್ರವಾಗಿ ಅರ್ಥಮಾಡಿಕೊಳ್ಳುವ ಶಕ್ತಿಯಿತ್ತು. 1970ರಲ್ಲಿ ಸಿ. ಐ. ಟಿ. ಯು.ವನ್ನು ರೂಪಿಸಲು ನಿರ್ಧರಿಸಿದಾಗಅಯಕಟ್ಟಿನ ಪ್ರಮುಖ ಸ್ಥಾನವಾದ ಪ್ರ.ಕಾರ್ಯದರ್ಶಿಯ ಸ್ಥಾನಕ್ಕೆ ಅವರೇ ಸ್ವಾಭಾವಿಕವಾದ ಆಯ್ಕೆಯಾಗಿದ್ದರು. ಅವರ ಶ್ರೀಮಂತ ಅನುಭವ, ಕಾರ್ಮಿಕ ನಾಯಕರಾಗಿ ಅಖಿಲಭಾರತ ಪ್ರಖ್ಯಾತಿ ಸಿ.ಐ.ಟಿ.ಯು. ಬೇಗನೆ ಕಾರ್ಮಿಕ ಚಳುವಳಿಯ ನಾಯಕ ಕೇಂದ್ರವನ್ನಾಗಿಸಿತು.

ಅವರ ಅನುಭವ ಮತ್ತು ಜನಪ್ರಿಯತೆ ತಮಿಳುನಾಡು ಘಟಕಕ್ಕೆ ಮಾತ್ರವೇ ಅಲ್ಲ ಇತರ ರಾಜ್ಯ ಸಮಿತಿಗಳಿಗೂ ಕೂಡ ಪಕ್ಷದ ಸಂದೇಶವನ್ನು ಜನರ ಮಧ್ಯೆ ತೆಗೆದುಕೊಂಡು ಹೋಗಲು ಸಹಾಯ ಮಾಡಿದವು. ಹೊಸ ಘಟಕಗಳನ್ನು, ಸಮಿತಿಗಳನ್ನು ಸ್ಥಾಪಿಸಲು ಅವರ ಈ ಅನುಭವ ಸಹಾಯ ಮಾಡಿತು.

ಇವರ ಸಾವಿನ ಸುದ್ದಿ ನನ್ನಲ್ಲಿ ಭಯಂಕರ ಶೂನ್ಯತೆಯನ್ನು ಅಪಾರವಾದ ಹಾನಿಯಾಯಿತೆಂಬ ಭಾವನೆಯನ್ನು ಸೃಷ್ಟಿಸಿತು. ನಾನು ನ.26 ರಂದೇ ಅವರನ್ನು ಆಸ್ಪತ್ರೆಯಲ್ಲಿ ನೋಡಿದಾಗಲೇ ಅವರು ಬಹಳ ದಿನ ಉಳಿಯುವುದಿಲ್ಲವೆಂಬುದು ನನಗೆ ಅರಿವಾಗಿತ್ತು. ಆದರೂ ಅವರ ಸಾವಿನ ಸುದ್ದಿಯೊಂದು ಭಯಂಕರ ಆಘಾತವೇ ಆಗಿತ್ತು.

ಬಲ ಮತ್ತು ಎಡ ಪರಿಷ್ಕರಣವಾದದ ವಿರುದ್ಧ ದೀಮಂತ ಹೋರಾಟ

ಕಾಂ|| -ಸುರಜೀತ್

ಅಪೂರ್ವ ಸಾಮರ್ಥ್ಯಗಳ ಸಂಗಾತಿ ಕಾಂ.ಪಿ.ಆರ್. ನಮ್ಮ ದೇಶದ ವಾಸ್ತವ ಪರಿಸ್ಥಿತಿಗೆ ಮಾರ್ಕ್ಸ್‌ವಾದ ಲೆನಿನ್‌ವಾದದ ವಿಜ್ಞಾನವನ್ನು ಅಳವಡಿಸುವ ಸೈದ್ಧಾಂತಿಕ ಕಾಣಿಕೆ ನೀಡಬಲ್ಲ ಮಾರ್ಕ್ಸ್‌ವಾದ ಲೆನಿನ್‌ವಾದದ ಆಳವಾದ ತಿಳುವಳಿಕೆಯಿದ್ದ ಸಂಗಾತಿಯೆಂದು ಸಿದ್ಧವಾಯಿತು. ಅವರೊಬ್ಬ ಕಾರ್ಮಿಕ ಸಂಘಟಕನಾಗಿದ್ದಂತೆ ಒಬ್ಬ ಪತ್ರಿಕೋದ್ಯಮಿಯೂ ಆಗಿದ್ದರು. ಐಕ್ಯ ಕಮ್ಯುನಿಸ್ಟ್ ಪಕ್ಷದ ಮುಖವಾಣಿ "ನ್ಯೂ ಏಜ್"ನ ಸಂಪಾದಕರಾಗಿದ್ದು ಕಮ್ಯುನಿಸ್ಟ್ ಶಿಸ್ತಿನಿಂದ, ಪಕ್ಷದ ರಾಜಕೀಯ ನಿಲುವನ್ನು ಬಹು ಜನಪ್ರಿಯವಾದ ರೀತಿಯಲ್ಲಿ ಜನರ ಮುಂದಿರಿಸಲು ಶಕ್ತರಾಗಿದ್ದರು. ವಿಧಾನಸಭೆ ಹಾಗೂ ಸಂಸತ್ತುಗಳೆರಡರಲ್ಲಿಯೂ ಅತ್ಯಂತ ಕಡಿಮೆ ಅವಧಿಯಲ್ಲಿ ಯಾವ ವಿಷಯದ ಬಗ್ಗೆಯಾದರೂ ಎಲ್ಲರೂ ತೀವ್ರ ಗಮನವಿಟ್ಟು ಕೇಳುವ ಭಾಷಣಗಳನ್ನು ಮಾಡುತ್ತಿದ್ದರು. ಜನ ಸಮೂಹಗಳನ್ನು ಗಂಟೆಗಟ್ಟಲೇ ಹಿಡಿದಿಡಬಲ್ಲ ಅಸಾಧಾರಣವಾಗ್ಮಿ ಅವರು.

ಪಕ್ಷದ ದಸ್ತಾವೇಜುಗಳನ್ನು ಬಹಳ ಶೀಘ್ರವಾಗಿ ತಯಾರಿಸ ಬಲ್ಲವರಾಗಿದ್ದರು. ತಮಿಳು, ಇಂಗ್ಲಿಷ್ ಮಾತ್ರವೇ ಅಲ್ಲ ಹಿಂದಿಯ ಮೇಲೆಯೂ ಹಿಡಿತವಿತ್ತು. ಮಾಲೆಯಾಳಂನ ಜ್ಞಾನವೂ ಇತ್ತು. ತಮ್ಮ ಸಂಗಾತಿಗಳ ಅಭಿಪ್ರಾಯಗಳನ್ನೇ ಸಮಾಧಾನ ಚಿತ್ತದಿಂದ ಆಲಿಸುವ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ, ಇವರ ಜೊತೆ ಕೆಲಸ ಮಾಡಲು ಸಂತೋಷವಾಗುತ್ತಿತ್ತು.

ಈ 50 ವರ್ಷಗಳಿಂದ ಪಕ್ಷ ಅನೇಕ ಬಿಕ್ಕಟ್ಟುಗಳನ್ನು ಎದುರಿಸಿತು. ಆದರೆ ಯಾವಾಗಲೂ ಕ್ಷೋಭೆಗೊಳ್ಳಲಿಲ್ಲ. ಪಕ್ಷ ಎದುರಿಸುತ್ತಿದ್ದ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಯಾವಾಗಲೂ ಮೂಲಭೂತ ಪುಸ್ತಕಗಳ ಕಡೆಗೆ ನೋಡುತ್ತಿದ್ದರು. ಅನೇಕ ಬುದ್ಧಿಜೀವಿಗಳ ರೋಗವಾದ ಅಹಂಕಾರ, ಜಂಭವಿಲ್ಲದೆ, ಪಕ್ಷ ಸಾಮೂಹಿಕ ತಿಳುವಳಿಕೆಗೆ ತಲೆ ಬಾಗುತ್ತಿದ್ದರು.

ಅವರೂ ಎಂದೂ ವಾದಾಂಧರಾಗಿರಲಿಲ್ಲ ಜೊತೆಗೇ ಮಾರ್ಕ್ಸ್‌ವಾದ ಲೆನಿನ್‌ವಾದದ ಶುದ್ಧತೆಯ ಬಗ್ಗೆ ತೀವ್ರ ಕಾಳಜಿ ವಹಿಸುತ್ತಿದ್ದರು. 1955 ರಲ್ಲಿ ಪಕ್ಷದಲ್ಲಿ ಚರ್ಚೆ ಆರಂಭವಾದಾಗ ಮೊದ ಮೊದಲು ನಮ್ಮೊಡನಿರದಿದ್ದರೂ ಎರಡು ಮೂರು ವರ್ಷಗಳಲ್ಲಿ ನಮ್ಮ ವಾದವನ್ನು ಅರ್ಥಮಾಡಿಕೊಂಡು ಅದನ್ನು ಬೆಳೆಸಲು ತಮ್ಮ ಕಾಣಿಕೆ ನೀಡಿದರು.

1960 ರಲ್ಲಿ ವಿಜಯವಾಡದ ಆರನೇ ಅಧಿವೇಶನದಲ್ಲಿ ಪಕ್ಷದ ಪರ್ಯಾಯ ಕಾರ್ಯಕ್ರಮವೊಂದರ ಮೂಲಕರ್ತರಾಗಿದ್ದರು. ಆಗಿನಿಂದ ಪರಿಷ್ಕರಣವಾದದ ವಿರುದ್ಧ ಹೋರಾಟದಲ್ಲಿಜೊತೆಗಾರರಾಗಿದ್ದೆವು. 19(4ರಲ್ಲಿ ಪಕ್ಷವಿಭಜನೆಯಾದ ಸಮಯದಲ್ಲಿ ಆ ಸವಾಲನ್ನೆದುರಿಸುವುದಕ್ಕೆ ಹಾಗೂ ಪಕ್ಷದ ಕರಡು ಕಾರ್ಯಕ್ರಮವನ್ನು ರೂಪಿಸುವುದಕ್ಕೆ ತಮ್ಮ ಕಾಣಿಕೆನೀಡಿದರು. ಕರಡು ಈ ಕಾರ್ಯಕ್ರಮವನ್ನು ಕಾಂ|| ಎಂ. ಬಸವಪುನ್ನಯ್ಯ ಕಾಂ||ಪಿ. ರಾಮಮೂರ್ತಿ, ಮತ್ತು ನನ್ನ ...ಂಯಿಂದ ಪಕ್ಷದೊಳಗೆ ವಿತರಿಸಲಾಯಿತು. [ಆಗ ಕಾಂ|| ಬಿ. ಟಿ. ಆರ್. ಯಿ... ಮನೆಯಲ್ಲಿದ್ದರು.]

ಸೆರೆ... ಗಿನಿಂದ ರಾಜಕೀಯ ಹಾಗೂ ...ಂತಿಕ ಪ್ರಶ್ನೆಗಳಲ್ಲಿ ನಮ್ಮೊಳಗೆ ಸೈದ್ಧಾ...ಪ್ರಾಯ ಬಂದ ಸಂದರ್ಭಗಳು ಭಿನ್ನಾಭಿ... ವಿರಳ.

...ಯರು ಪಕ್ಷದ ಐಕ್ಯತೆಗೆ ... ನಕ್ಸಲೀ... ಮಾಡಿದಾಗ ಈ ಎಡ ಭಂಗವುಂಟು ವಿರುದ್ಧ ಪಕ್ಷವನ್ನು ರಕ್ಷಿಸಿದರು. ಅವರ ಪ್ರಯತ್ನದಿಂದ ತಮಿಳ ನಾಡಿನಲ್ಲಿ ಈ ವಾದದ ಹಾವಳಿಯಿಂ ಪಕ್ಷವನ್ನುಳಿಸಲು ಸಾಧ್ಯವಾಯಿತು. (

ಧೀಮಂತ ಹೋರಾಟಗಾರನಿಗೆ ಶ್ರದ್ಧಾಂಜಲಿ

ಬೆಂಗಳೂರು-ಕಾಂ|| ಎನ್. ಎಲ್ ಉಪಾಧ್ಯಾಯರ ಹೇಳಿಕೆ

ದಿ.27-12-87ರಂದು ಜರುಗಿದ ಸಂತಾಪ ಸೂಚಕ ಸಭೆಯಲ್ಲಿ ರಾಜ್ಯದಲ್ಲಿ ನಮ್ಮ ಪಕ್ಷದ ಹಿರಿಯನಾಯಕರಾದ ಕಾಮ್ರೇಡ್ ಎನ್.ಎಲ್.ಉಪಾಧ್ಯಾಯರವರು ಭಾಗವಹಿಸಿದ್ಧರೂ ತಮ್ಮ ಅನಾರೋಗ್ಯದಿಂದ ಮಾತನಾಡಲಾಗಲಿಲ್ಲವಾದ್ದರಿಂದ ಅವರ ಅನಿಸಿಕೆಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಕಾಂ||ಪಿ.ಆರ್.ರವರು 1940ರ ದಶಕದಿಂದ ಕರ್ನಾಟಕದಲ್ಲಿ ನಾನು ಪಕ್ಷದ ಕೆಲಸ ಪ್ರಾರಂಭಿಸಿದಂದಿನಿಂದಲೂ ನಮ್ಮ ಎಲ್ಲಾ ಚಟುವಟಿಕೆಗಳಿಗೂ ಮಾರ್ಗದರ್ಶನ ನೀಡುತ್ತಿದ್ದರು. ಆರಂಭದಲ್ಲಿ ಕೆ.ಜಿ.ಎಫ್. ಹಾಗೂ ಅನಂತರ ಬೆಂಗಳೂರಿನಲ್ಲಿ ಟ್ರೇಡ್ ಯೂನಿಯನ್ ಚಳುವಳಿ ಮತ್ತು ಪಾರ್ಟಿ ಸಂಘಟನೆ ಬೆಳೆದು ಬಂಗಾಡ ಅವರ ಸಲಹೆ ಮತ್ತು ಸಹಾಯ ಬಹಳ ಅಗತ್ಯವಾಗಿತ್ತು. ಪಾರ್ಟಿ ಬೆಳವಣಿಗೆಯಲ್ಲಿ ಸಮಸ್ಯೆಗಳು ತಲೆದೋರಿದ ಸಂದರ್ಭಗಳಲ್ಲಿ ಅವರ ಅಮೂಲ್ಯವಾದ ಮಾರ್ಗದರ್ಶನ ನಮಗೆ ದೊರೆಯುತ್ತಿತ್ತು. ಕೇಂದ್ರ ಸಮಿತಿ ಸಭೆಯಲ್ಲಾಗಲೀ ಅಥವಾ ಇತರೆ ವೇದಿಕೆಗಳಲ್ಲಾಗಲೀ ವಾದ ವಿವಾದ ತಲೆದೋರಿದಾಗ ಪಿ.ಆರ್ ಮಂಡಿಸುತ್ತಿದ್ದ ತಿದ್ದುಪಡಿಗಳು ಮತ್ತು ಸಲಹೆಗಳು ಸ್ಪಷ್ಟ ನಿಲುವನ್ನು ತಳೆಯಲು ತುಂಬಾ ಸಹಾಯಕವಾಗಿದ್ದವು. ನನಗಂತೂ ವೈಯುಕ್ತಿಕವಾಗಿ ಅನೇಕ ಸಂದರ್ಭಗಳಲ್ಲಿ ನಾನು ಎದೆಗುಂದಿದಾಗ ನನ್ನಲ್ಲಿ ಧೈರ್ಯ ತುಂಬುತ್ತಿದ್ದರು. ಅದಕ್ಕಾಗಿ ನಾನು ತುಂಬಾ ಆಭಾರಿಯಾಗಿದ್ದೇನೆ.

ಕರ್ನಾಟಕದ ಪಾರ್ಟಿ ಬೆಳವಣಿಗೆಗೆ ಸಹಾಯ ಮಾಡಿದ ಪಕ್ಷದ ನಾಯಕರ ಪೈಕಿ ಕಾಂ||ಪಿ ಆರ್.ರವರ ಪಾತ್ರ ಮಹತ್ವದ್ದಾಗಿತ್ತು. ಅವರಿಗೆ ನಮ್ಮ ರಾಜ್ಯದ ವಿವಿಧ ಪ್ರದೇಶಗಳ ಸಮಸ್ಯೆಗಳು ಹಾಗೂ ಕಾಮ್ರೇಡ್ಸ್‌ಗಳ ಬಗ್ಗೆ ಚೆನ್ನಾಗಿ ಅರಿವಿತ್ತು. ಚುನಾವಣೆಗಳಲ್ಲೂ ಮತ್ತು ಮುಷ್ಕರ ಮುಂತಾದ ಹೋರಾಟಗಳಲ್ಲೂ ಅವರ ನೆರವು ಅನಿವಾರ್ಯವಾಗಿತ್ತು. ಅವರ ನಿಧನದಿಂದಾಗಿ ನಮ್ಮ ಚಳುವಳಿಗೆ ಅಪಾರ ನಷ್ಟ ಉಂಟಾಗಿರುವುದಲ್ಲದೆ ನಮಗೆ ಮೇಲಿಂದ ಮೇಲೆ ದೊರೆಯುತ್ತಿದ್ದ ಮಾರ್ಗದರ್ಶನದಲ್ಲಿ ಸಹ ಕೊರತೆಯುಂಟಾಗಿದೆ.

ಸಾರ್ವಜನಿಕರ ಸಭೆಯಲ್ಲಿ

ತನ್ನ ಇಡೀ ಜೀವನವನ್ನೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಅನುಷ್ಠಾನಕ್ಕಾಗಿ, ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗಾಗಿ, ರೈತ ಕಾರ್ಮಿಕರ ಹೋರಾಟಕ್ಕಾಗಿ ಕೊನೆಯುಸಿರೆಳೆಯುವರೆಗೂ ಶ್ರಮಿಸಿದ ಧೀಮಂತ ಮುಖಂಡ ಕಾಂ.ಪಿ. ರಾಮಮೂರ್ತಿಯವರ ಅಕಸ್ಮಿಕ ನಿಧನಕ್ಕೆ ಶ್ರದ್ಧಾಂಜಲಿಯನ್ನರ್ಪಿಸಲು ಬೆಂಗಳೂರಿನಟೌನ್ ಹಾಲಿನಲ್ಲಿ ಡಿ. 27ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರು ದಿ.ಕಾಂ.ಪಿ. ರಾಮಮೂರ್ತಿಯವರ ಜೀವನದ, ಹೋರಾಟದ, ತತ್ವನಿಷ್ಠೆಯ ಗುಣಗಾನ ಮಾಡಿದರು.

ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾ.ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ ಸಭೆಯನ್ನುದ್ದೇಶಿಸಿ ಸಿ.ಪಿ.ಐ.(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್, ಸಿ.ಪಿ.ಐ. ರ್‍ಯಾಜ ಕಾರ್ಯದರ್ಶಿ ಕಾಂ. ಎಂ.ಎಸ್. ಕೃಷ್ಣನ್, ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀಮಾನ್ ರಮೇಶ ಕುಮಾರ್ (ಶಾಸಕರು) ಕಾಂಗ್ರೆಸ್ (ಐ) ಪಕ್ಷದ ಶಾಸಕ ಎ. ಕೃಷ್ಣಪ್ಪ, ಡಿ.ಎಂ.ಕೆ. ರಾಜ್ಯ ಕಾರ್ಯದರ್ಶಿ ಶ್ರೀಮಾನ್ ಜೋಳನ್ ರವರುಗಳು ಮಾತನಾಡಿದರು.

ಹರಿಹರ

ಕಾಂ|| ರಾಮಮೂರ್ತಿ ನಿಧನದ ವಾರ್ತೆ ಬರುತ್ತಿದ್ದಂತೆಯೇ ಕಛೇರಿ ಧ್ವಜ ಅರ್ಧಕ್ಕಿಳಿಸಿ ಸಂಜೆ ಹರಿಹರದ ಪಕ್ಷದ ಕಛೇರಿಯಲ್ಲಿ ಕಾ|| ನಿತ್ಯಾನಂದ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಸಭೆ ಸೇರಿದರು. ಕಾಂ. ಗೋವಿಂದಪ್ಪ, ಆನಂದರಾವ್, ಕೊಟ್ರಯ್ಯ, ಜಕಣಾಚಾರಿ, ಎಫ್.ಬಿ. ಹಿರೇಮಠ, ಅಣ್ಣಪ್ಪ, ಮತ್ತು ದಯಾನಂದ ಅವರು ಮಾತನಾಡಿ ಕಾ|| ಪಿ.ಆರ್. ರವರ ಹೋರಾಟಮಯ ಬದುಕನ್ನು ಸ್ಮರಿಸಿದರು.

ಪೂಜಾರಿಯವರ ಸಾಲಮೇಳ

ವಿಜಾಪುರ

ಜನಾರ್ಧನ ಪೂಜಾರಿಯವರ ಸಾಲ ಮೇಳ ಫಲಾನುಭವಿಗಳ ಆರ್ಥಿಕ ದುಸ್ಥಿತಿಯನ್ನಾಗಲೀ ಬಡತನ ನಿವಾರಣೆಯ ಉಪಾಯವನ್ನಾಗಲೀ ಒದಗಿಸದೆ, ಅದು ಬಡತನವನ್ನು ಹಂಚುವ ಯೋಜನೆಯಾಗಿದೆಂದು ಮಾರ್ಕ್ಸ್‌ವಾದಿ ಕಮ್ಯುನಿಷ್ಟ ಪಕ್ಷದ ಮುಖಂಡರಾದ ಎಸ್.ಕೆ. ಉಪಾಧ್ಯಾಯರು ಸಹಾಯಕ ಆರ್ಥಿಕ ಮಂತ್ರಿ ಜನಾರ್ದನ ಪೂಜಾರಿಯವರು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಸಿದ ಬೃಹತ್ ಸಾಲ ಮೇಳವನ್ನು ಟೀಕಿಸಿದ್ದಾರೆ.

ಆರ್ಥಿಕ ಮುಗ್ಗಟ್ಟಿನಿಂದಾಗಿ ಕೃಷ್ಣ ಮೇಲ್ದಂಡೆ ಯೋಜನೆಯಂತಹ ನೀರಾವರಿ ಯೋಜನೆಗಳು ಕುಂಟುತ್ತ ನಡೆದಿವೆ. ವಿಜಾಪೂರ, ಬಾಗಲಕೋಟೆ ದಾವಣಗೆರೆಯ ನೂಲಿನ ಗಿರಣಿಗಳು ಮುಚ್ಚಿವೆ ರಾಜ್ಯದ ಕೈಗಾರಿಕಾ ಅಭಿವೃದ್ಧಿ ಹೀನಾಯ ಪರಿಸ್ಥಿತಿಯಲ್ಲಿದೆ, ಬ್ಯಾಂಕುಗಳ ಹಣ ಉತ್ಪಾದನೆಗೂ ಉತ್ಪನ್ನ ಹೆಚ್ಚಿಸಲಿಕ್ಕೂ ಸಹಾಯವಾಗಬೇಕಾಗಿದೆ, ಜನಾರ್ಧನಪೂಜಾರಿಯವರು ಸಾಲಮೇಳದ ಫಲಾನುಭವಿಗಳಲ್ಲಿಎಷ್ಟು ಜನ ತಾವು ಪಡೆದ ಹಣವನ್ನು ಉತ್ಪಾದನೆ ಮತ್ತು ನಿರುದ್ಯೋಗ ನಿವಾರಣೆಗೆ ಉಪಯೋಗಿಸಿದ್ದಾರೆಂಬುದರ ಕುರಿತು ಅಂಕಿ, ಸಂಖ್ಯೆ ಪ್ರಕಟಿಸುತ್ತಾರೆಯೇ ತಾವು ಕೊಡುವ ಹಣ ಯಾವ ರೀತಿ ಉಪಯೋಗವಾಗುತ್ತಿದೆಯೆಂದು ತಿಳಿಸುತ್ತಾರೆಯೇ ? ರಾಜಕೀಯ ದುರುದ್ದೇಶಕ್ಕಾಗಿಯೇ ಪೂಜಾರಿಯವರು ಈ ಸಾಲ ಮೇಳ ನಡೆಸುತ್ತಿದ್ದಾರೆ. ಜನರಲ್ಲಿ ಭ್ರಮೆ ಉಂಟುಮಾಡುತ್ತಿದ್ದಾರೆಂದು ಸಿ.ಪಿ. ಐ.(ಎಂ) ಆರೋಪಿಸಿತ್ತು. ಅದೇಆರೋಪಇಂದೂ ಮಾಡುತ್ತಿದೆ. ಇಂಥ ರಾಜಕೀಯ ದುರುದ್ದೇಶದ ಸಾಲ ಮೇಳವನ್ನೂ ಜನತೆ ವಿರೋಧಿಸಲೇಬೇಕು ಎಂದು ಕಮ್ಯುನಿಷ್ಟ ಪಕ್ಷದ ಮುಖಂಡರು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಡಿ. ವೈ.ಎಫ್. ಐ. ಬೆಟ್ಟ

ಮದ್ರಾಸಿನಿಂದ 10 ಕಿ. ಮೀಟರ್ ಸಮೀಪದ ದಕ್ಷಿಣದ ರಾಷ್ಟ್ರೀಯ ಹೆದ್ದಾರಿ ಹಾಗೂ ರೈಲ್ವೆ ಬಳಿ ಡಿ. ವೈ. ಎಫ್. ಐ. ಬೆಟ್ಟವೊಂದಿದೆ. ಡಿ. ವೈ. ಎಫ್. ಐ. ಬೆಟ್ಟ ಎಂದೊಡನೆ ನಮ್ಮ ಸಂಗಾತಿಗಳಿಗೆ ಆಶ್ಚರ್ಯವಾಗಬಹುದು. ಆದರೂ ಸತ್ಯ ಸಂಗತಿ. ರೈಲ್ವೆ ಹಾಗೂ ಹೆದ್ದಾರಿಯಲ್ಲಿ ಪ್ರಯಾಣಿಸುವ ಸಾವಿರಾರು ಜನರನ್ನು ಆಕರ್ಷಿಸುತ್ತಿದ್ದ "ಪಲ್ಲಾವರಂ ಬೆಟ್ಟ" ನವಂಬರ್ 26 ರಿಂದ ಡಿ. ವೈ. ಎಫ್. ಐ. ಬೆಟ್ಟವಾಗಿ ಪರಿವರ್ತನೆಗೊಂಡಿದೆ.

ಇತ್ತೀಚೆಗೆ ಡಿಸಂಬರ್ 15-19 ರ ವರೆಗೆ ಮದ್ರಾಸ್‌ನಲ್ಲಿ ಜರುಗಿದ ಅಖಿಲ ಭಾರತ 3 ನೇ ರಾಷ್ಟ್ರ ಸಮ್ಮೇಳನದ ಅಂಗವಾಗಿ ನಡೆದ ಪ್ರಚಾರ ಕಾರ್ಯದಲ್ಲಿ ಸಂಶೋಧಿಸಲ್ಪಟ್ಟ ಈ ಬಂಡೆಯ ಮೇಲೆ ದೊಡ್ಡ ಕಲ್ಲುಗಳನ್ನು ಜೋಡಿಸಿ ಎತ್ತರದ ಗೋಡೆ ನಿರ್ಮಿಸಲಾಯಿತು. ಹೆಸರಾಂತ ಇಂಜಿನಿಯರ್‌ಗಳು ಅಲ್ಲಿಗೆ ಬಂದರು ಇಡೀ ಬಂಡೆ ವೀಕ್ಷಿಸಿದ ಅವರು ಏನೊಂದು ತೋಚದೆ ಹಿಂತಿರುಗಬೇಕಾಯಿತು. ಹಿಡಿದ ಕೆಲಸವನ್ನು ಮಾಡಿಯೇ ತೀರುವ ಛಲದಿಂದ 21 ಮಂದಿ ಕಾರ್ಯಕರ್ತರು ಕೆಲಸ ಪ್ರಾರಂಭಿಸಿ 5 ದಿನಕ್ಕೆ ಒಂದು ಅಕ್ಷರದಂತೆ ಹಗಲಿರುಳು ಮಾಡಿದ ಪರಿಶ್ರಮದಿಂದ 40 ಅಡಿ ಎತ್ತರ 36 ಅಡಿ ಅಗಲದ 1,400 ಚ. ಅಡಿ ಉದ್ದದ ತಲೆಬರಹ ನಿರ್ಮಾಣಗೊಂಡಿತು. ಗಿಂಡಿ-ತಾಂಬರಂ ಪ್ರದೇಶದ ಕಾ|| ಕರುಣ, ದಯಾಳನ್, ಕುಮಾರ್, ಸೂರ್ಯ, ರವಿ, ನಾರಾಯಣನ್ ಮುಂತಾದ ಸಂಗಾತಿಗಳು ಕೈಗೊಂಡ ಈ ಕಾರ್ಯ ಪ್ರಶಂಸಾರ್ಹವಾಗಿದೆ.

ಎಸ್. ಎಫ್. ಐ. ರಾಜ್ಯಸಮ್ಮೇಳನ ಸ್ವಾಗತ ಸಮಿತಿ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) 5ನೇಯ ರಾಜ್ಯ ಸಮ್ಮೇಳನವು ಗುಲ್ಬರ್ಗಾ ನಗರದ ಕೋಠಾರಿ ಭವನದಲ್ಲಿ ಜನವರಿ 16 ರಿಂದ 18 ರವರೆಗೆ ಜರುಗಲಿದೆ. ಸಮ್ಮೇಳನದ ಯಶಸ್ವಿಗಾಗಿ ವ್ಯಾಪಕ ಸಿದ್ಧತೆಗಳು ಭರದಿಂದ ನಡೆದಿವೆ. ವಿವಿಧ ಸಂಘಟನೆಗಳು ಮತ್ತು ಶಿಕ್ಷಣ ಹಾಗೂ ಸಾರ್ವಜನಿಕ ರಂಗದ ಗಣ್ಯರು, ಬುದ್ಧಿಜೀವಿಗಳನ್ನೊಳಗೊಂಡ ಸ್ವಾಗತ ಸಮಿತಿ ರಚಿಸಲಾಗಿದೆಡಾ|| ಬಿ.ಜಿ.ಜವಳಿ (ಅಧ್ಯಕ್ಷರು) ಸಿ. ಪಾಟೀಲ ವಕೀಲರು ಮಹಾ ನಗರ ಸಭೆ ಸದಸ್ಯರು (ಕಾರ್ಯಾಧ್ಯಕ್ಷರು) ರಾಜೇಂದ್ರ ಪಾಟೀಲ ಎನ್.ಡಿ. ಪಾಟೀಲ, ಹ.ಹು ಬಂಜಂತ್ರಿ (ಉಪಾಧ್ಯಕ್ಷರು) ಕಾಂ. ಮಾರುತಿ ಮಾನ್ಪಡೆ (ಕಾರ್ಯದರ್ಶಿ) ನಿಂಗಣ್ಣಾ ಮೊರಟಗಿ, (ಸಹಕಾರ್ಯದರ್ಶಿ) ಪ್ರೊ|| ಆರ್.ಕೆ. ಹುಡುಗಿ (ಖಜಾಂಚಿ) ಯವರು ಆಯ್ಕೆ ಗೊಂಡಿರುತ್ತಾರೆ. ನಂ.14, ಜಹಗೀರ್‌ದಾರ್ ಬಿಲ್ಡಿಂಗ್, ಸ್ಟೇಶನ್ ಬಜಾರ್, ಗುಲ್ಬರ್ಗಾ ಸ್ವಾಗತ ಸಮಿತಿ ವಿಳಾಸವಾಗಿದ್ದು ಈ ವಿಳಾಸಕ್ಕೆ ಸಂಪರ್ಕಿಸಬಹುದಾಗಿದೆ.

ಕಾಂಗ್ರೆಗೆ ಪರ್ಯಾಯ

ಕಾಂಗ್ರೇಸ್ ಆಡಳಿತ ದೇಶದಆರ್ಥಿಕ ಬಿಕ್ಕಟಿನ ಭಾರವನ್ನು ಜನ ಸಾಮಾನ್ಯರ ಮೇಲೆ ಹೇರಿ ಬೆಲೆ ಏರಿಕೆ, ಬಡತನ, ನಿರುದ್ಯೋಗ, ಲಂಚ, ಭ್ರಷ್ಟಾಚಾರಕ್ಕೆ ಅನುವು ಮಾಡಿದರೆ ಪರಿಣಾಮವಾಗಿ ದೇಶದಲ್ಲಿ ಗಂಭೀರವಾದ ರಾಜಕೀಯ ನೆಲಸಿ ದೇಶದ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಸಮಗ್ರತೆಗೆ ಅಪಾಯ ಬಂದೊಡ್ಡಿದೆ ಎಂದು ಸಿ. ಪಿ. ಐ.[ಎಂ] ಪಕ್ಷದ ದ. ಕ. ಜಿಲ್ಲಾ ಕಾರ್ಯದರ್ಶಿ ಬಂಟ್ವಾಳದ ವಿಟ್ಲದಲ್ಲಿರುವ ಪುರಭವನದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಆರೋಪಿಸಿದರು.

ಸಿ. ಪಿ. ಐ. [ಎಂ] ಅನುಸರಿಸಿದ ಸರಿಯಾದ ರಾಜಕೀಯ ನಿಲುವೆಯಿಂದ ಮೂರು ರಾಜ್ಯದಲ್ಲಿ ಅಧಿಕಾರ ನಡೆಸಲು ನೇತೃತ್ವನೀಡಲು ಸಾಧ್ಯವಾಗಿದೆ ಎಂದು ಹೇಳಿದ ಅವರು ಕಾಂಗ್ರೆಗೆ ಪರ್ಯಾಯ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳಿಂದ ಮಾತ್ರನೀಡಲು ಸಾಧ್ಯವೆಂದು ಅಭಿಪ್ರಾಯಪಟ್ಟರು.

ಸಭೆಯ ಅಧ್ಯಕ್ಷತೆಯನ್ನುಬಂಟ್ವಾಳ ತಾಲೋಕು ಸಿ.ಪಿ.ಐ [ಎಂ] ಕಾರ್ಯದರ್ಶಿ ಕಾ|| ವಾಸುಗಟ್ಟಿ ವಹಿಸಿದ್ದರು. ಕಾ|| ಕೆ. ಮೂಸಬ್ಬ ಹಾಗೂ ಪೂವಯ್ಯಾ ಸಭೆಯಲ್ಲಿ ಮಾತನಾಡಿದರು.

ಐಕ್ಯರಂಗಕ್ಕೆ ದೇಣಿಗೆ

ಪಕ್ಷದ ಅಭಿಮಾನಿಗಳಾದ ಕೆ. ಸುದರ್ಶನ ಮತ್ತು ಮಂಜುಳಾ ಹವಲ್ದಾರ ಹಾಗೂ ಗಣೇಶರಾವ್ ಮತ್ತು ಕೆ. ಸುಮ ಇವರು ಹಳೇ ಸಂಪ್ರದಾಯಗಳನ್ನು ಬಿಟ್ಟು ಹಗರಿಬೊಮ್ಮನಹಳ್ಳಿಯಲ್ಲಿ ಸರಳವಾಗಿ ಮದುವೆಯಾಗಿದ್ದಾರೆ. ಇವರು ತಮ್ಮದೇ ಆದ "ಐಕ್ಯರಂಗ" ಪತ್ರಿಕೆಗೆ ರೂ. 100 ಸಹಾಯಧನ ಕಳುಹಿಸಿದ್ದಾರೆ. ಇದನ್ನು ಆದರದಿಂದ ಸ್ವೀಕರಿಸಿ ನವದಂಪತಿಗಳಿಗೆ ಶುಭ ಕೋರುತ್ತೇವೆ.

ಸೌದತ್ತಿ ತಾಲೂಕಿನ ಹಂಚಿನಾಳ ಗ್ರಾಮದ ಡಿ. ವೈ. ಎಫ್. ಐ. ಮುಖಂಡರಾದ ಎಲ್. ಎಸ್. ನ್ಯಾಕ ಅವರು ತಮ್ಮ ತಂಗಿಯ ವಿವಾಹದ ನೆನಪಿಗಾಗಿ ಐಕ್ಯರಂಗಕ್ಕೆ ರೂ. 101 ಕಳುಹಿಸಿದ್ದಾರೆ. ಅವರಿಗೂ ಐಕ್ಯರಂಗ ಪರವಾಗಿ ಶುಭಾಶಯಗಳು.

ವಕ್ವಾಡಿ ಗ್ರಾಮ ಘಟಕ ರಚನೆ

ಕುಂದಾಪುರ ತಾ. ವಕ್ವಾಡಿಯಲ್ಲಿ ಡಿ.ವೈ.ಎಫ್.ಐ. ಸಭೆ ಚಂದ್ರಶೇಖರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಂ. ಮಹಾಬಲ ವಡೇರ ಹೋಬಳಿ, ತಾಲೋಕು ಕಾರ್ಯದರ್ಶಿ ನಾರಾಯಣ ಆಚಾರ್, ಸಭೆಯಲ್ಲಿ ಮಾತನಾಡಿದರು. ಗ್ರಾಮ ಸಮಸ್ಯೆ ಕುರಿತು ಚರ್ಚಿಸಲಾಯಿತು. ನೂತನ ಸಮಿತಿಗೆ ಅಧ್ಯಕ್ಷರಾಗಿ ಕಾಂ. ಚಂದ್ರಶೇಖರ ಶೆಟ್ಟಿ, ಉಪಾಧ್ಯಕ್ಷರಾಗಿ ಕಾಂ. ಸುಧಾಕರಶೆಟ್ಟಿ, ಕಾರ್ಯದರ್ಶಿಯಾಗಿ ರವಿರಾಜ ಶೆಟ್ಟಿ, ಜೊತೆ ಕಾರ್ಯದರ್ಶಿಯಾಗಿ ಕಾಂ. ಶೀನ ಶೆಟ್ಟಿಗಾರರವರನ್ನೊಳಗೊಂಡ 11 ಜನರ ಕಾರ್ಯಕಾರಿ ಸಮಿತಿ ಆಯ್ಕೆಗೊಂಡಿತು.

ಸಿದ್ಧಾಪುರದಲ್ಲಿ ರೈತ ಸಂಘದ ಸಭೆ

ಕುಂದಾಪುರ ತಾಲೋಕು ಸಿದ್ಧಾಪುರದಲ್ಲಿ ರೈತ, ಕೃಷಿ ಕೂಲಿಗಾರರ ಸಭೆಯೊಂದು ಡಿ. 20ರಂದು ಎಚ್. ವಿಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ತಾಲೋಕು ಕಾರ್ಯದರ್ಶಿ ಕಾಂ. ಯು. ದಾಸ ಭಂಡಾರಿಯವರು ಮಾತನಾಡಿ ರೈತ, ಕೃಷಿ ಕೂಲಿಗಾರರ ಸಮಸ್ಯೆಗಳನ್ನು ವಿವರಿಸಿ ಪರಿಹಾರಕ್ಕಾಗಿ ಹೋರಾಡಲು ಸಂಘಟನೆಯನ್ನು ಬಲಪಡಿಸಲು ಶ್ರಮಿಸಬೇಕೆಂದು ಕರೆ ನೀಡಿದರು.

ಹೆಚ್. ವಿಠಲ್ ಶೆಟ್ಟಿ (ಅಧ್ಯಕ್ಷ) ರಘುರಾಮಶೆಟ್ಟಿ, ಜೆ.ನರಸಿಂಹಕುಲಾಲ (ಉಪಾಧ್ಯಕ್ಷರು) ಜೆ.ರಾಜೀವಕುಲಾಲ (ಕಾರ್ಯದರ್ಶಿ) ಜೆ.ವಿಠಲಕುಲಾಲ, ಲಕ್ಷ್ಮಣಕಿಣಿ(ಸಹ ಕಾರ್ಯದರ್ಶಿಗಳು) ಹಾಗೂ 20 ಸದಸ್ಯರ ಸಮಿತಿಯನ್ನು ಸಭೆ ಆರಿಸಿತು.

ಬ್ಯಾಲೆ ಎಂಬ ಮಿಂಚು ಕೋಲು

'ಹುಡುಗಿ ನರ್ತಿಸಿದರೆ ಸಂಗೀತ ಅವಳ ಮಾಂಸದಲ್ಲಿ ಮೈ ಬಚ್ಚಿಕೊಳ್ಳುತ್ತದೆ' ಎನ್ನುತ್ತಾನೆ ಕವಿ ಓಮರ್. ಬ್ಯಾಲೆ ಅದಕ್ಕೊಂದು ಉತ್ತಮ ಉದಾಹರಣೆ. ಬ್ಯಾಲೆ ಸೋವಿಯೆತ್ ಸಂಸ್ಕೃತಿಯ ಪರಿಪಾಕ. ಇಡೀ ಜಗತ್ತಿನಲ್ಲಿ ಸೋವಿಯೆತ್ ದೇಶ ಬ್ಯಾಲೆಯ ಕೇಂದ್ರ ಬಿಂದು. ಹಾಡು ನೃತ್ಯಗಳ ಸಮ್ಮಿಳನದ ಒಡಲು ಬ್ಯಾಲೆ

ಬೋಲ್ಶ್ಯಾಯ್ ಬ್ಯಾಲೆಯ ಇತಿಹಾಸ ಅಪೂರ್ವ. ಬೋಲ್ಶ್ಯಾಯ್ ಎಂದರೆ ಭವ್ಯ, ಬೃಹತ್ ಎಂದರ್ಥ. ಬ್ಯಾಲೆ ನಿಜಕ್ಕೂ ಭವ್ಯ ಬೋಲ್ಶ್ಯಾಯ್. ಬ್ಯಾಲೆ ಈ ಹಿಂದೆ ಹಲವಾರು ಬಾರಿ ಭಾರತದಲ್ಲಿ ಪ್ರದರ್ಶನ ನೀಡಿದೆ. ಆದರೆ ಈ ಬಾರಿಯ ವಿಶಿಷ್ಟತೆ ಎಂದರೆ ಬ್ಯಾಲೆಯ ಸಂಪೂರ್ಣ ತಂಡವೇ ಇಲ್ಲಿಗೆ ಬಂದಿಳಿಯಲಿದೆ.

ಬ್ಯಾಲೆ ತಂಡ ಒಂದು ವರ್ಷದಲ್ಲಿ ತನ್ನ ರಂಗ ಅಲಂಕರಣ ಹಾಗೂ ವೇಷ ಭೂಷಣಗಳಿಗಾಗಿಯೇ 1 ಲಕ್ಷ 20 ಸಾವಿರ ಮೀಟರ್ ಬಟ್ಟೆಯನ್ನು ಬಳಸುತ್ತದೆ ಎಂದರೆ ಅದರ ಭವ್ಯತೆಯ ಕಲ್ಪನೆ ಬರುತ್ತದೆ. ಬೋಲ್ಶ್ಯಾಯ್ ಬ್ಯಾಲೆ ಅಂದರೆ ಅದೊಂದು ಬೃಹತ್ ಕುಟುಂಬ 3000 ಕಲಾಕಾರರು ಇದರಲ್ಲಿದ್ದಾರೆ. ಬೋಲ್ಶ್ಯಾಯ್ ರಂಗ ಭೂಮಿಯಲ್ಲಿ 92 ವಿಶಿಷ್ಟತೆಗಳಲ್ಲಿ ಪರಿಣಿತರಾಗಿರುವ 320 ರಂಗ ಕರ್ಮಿಗಳಿದ್ದಾರೆ. ಸುಮಾರು 300 ಮಂದಿ ಅದರ ರಂಗ ಸಂಯೋಜನೆ ಮಾಡುತ್ತಾರೆ. 74 ಮಂದಿ ಅಪೇರಾ ಹಾಡುಗಾರರು, 200 ಮಂದಿ ನಟರು, 280 ಮಂದಿ ನರ್ತಕರು ಈ ತಂಡದ ಹೆಗ್ಗಳಿಕೆ.

ರೋಮಿಯೋ ಜ್ಯೂಲಿಯಟ್, ಸಿಂಡ್ರೆಲಾ, ಸ್ವಾನ್ ಲೇಕ್, ರೆಡ್‌ಪಪ್ಪಿ, ಸ್ಪಾರ್ಟಕಸ್, ಲವ್ ಫಾರ್ ಲವ್ ಖ್ಯಾತ ಬ್ಯಾಲೆಗಳು. ಅನ್ನಾ ಪಾವ್ಲೊ, ಗಲೀನ ಉಲವನೋವಾ, ಮಾಯಾ ಪ್ಲಿಯೆತ್ಸೆಸ್ಕಾಯ ಬ್ಯಾಲೆಯ ಹಂಸ ನಡಿಗೆಯ ನರ್ತಕಿಯರು ಭಾರತದಲ್ಲಿಯೂ ಹೆಸರುವಾಸಿ.

ಬೋಲ್ಶ್ಯಾಯ್ ಬ್ಯಾಲೆ ತಂಡ ತನ್ನ ಪ್ರದರ್ಶನಕ್ಕೆ ಹಲವು ಭಾರತೀಯ ವಸ್ತುಗಳನ್ನೂ ಆರಿಸಿಕೊಂಡಿವೆ. ಪ್ರಾಚೀನ ಭಾರತದಲ್ಲಿ ನಡೆದ ಘಟನೆಯನ್ನು ಆಧರಿಸಿ 'ಲಾ ಬಯದರೆ' ಎಂಬ ಬ್ಯಾಲೆಯನ್ನು 1877ರಲ್ಲಿಯೇ ಸೈಂಟ್ ಪೀಟರ್ ಬರ್ಗ್‌ನಲ್ಲಿ ಪ್ರದರ್ಶಿಸಲಾಯಿತು. 'ಇಂಡಿಯನ್ ಪೋಯಮ್' (ಭಾರತೀಯ ಕಾವ್ಯ) ಇತ್ತೀಚಿನ ಬ್ಯಾಲೆ ಪ್ರದರ್ಶನ.

ಯೂರಿ ಗ್ರಿಗೋರೆವಿಚ್ 1964 ರಿಂದಲೂ ಬೋಲ್ಶ್ಯಾಯ್ ರೆಪರ್ಟರಿಯ ಮುಖ್ಯಸ್ಥರು. 'ನಾನು ಭಾರತವನ್ನು ಹಲವು ಬಾರಿ ಸಂದರ್ಶಿಸಿದ್ದೇನೆ. ನಾನು ಸಂದರ್ಶಿಸಿದ ದೇಶಗಳಲ್ಲಿ ನನ್ನ ಮೇಲೆ ಭಾರತದಂತೆ ಪ್ರಭಾವ ಬೀರಿದ ರಾಷ್ಟ್ರಗಳು ಬೆರಳೆಣಿಕೆಯಷ್ಟು' ಎನ್ನುವ ಗ್ರಿಗೋರೆವಿಚ್ 'ಭಾರತ ಉತ್ಸವ ಯುಗಾಂತರ ಭಾರತೀಯ ಸಂಸ್ಕೃತಿಯ ಕುರಿತು ಸರಿಯಾದ ಪರಿಚಯ ಮಾಡಿಕೊಳ್ಳುವ ಸದವಕಾಶ ಕಲ್ಪಿಸಿದೆ' ಎಂದು ಹೇಳಿದ್ದಾರೆ.

ಈ ಬಾರಿ ಬೆಂಗಳೂರಿನಲ್ಲಿ ಬೋಲ್ಶ್ಯಾಯ್‌ನ 'ಗಿಸೆಲ್ಲೆ' ಮತ್ತು ಲವ್ ಫಾರ್ ಲವ್' ಪ್ರದರ್ಶಿತವಾಗಲಿವೆ. ಅಪಾಲ್ಷ ಅಪಮರ್‌ರವರ 'ಗಿಸೆಲ್ಲೆ' ಅತ್ಯಂತ ಪ್ರಾಚೀನ ಕ್ಲಾಸಿಕಲ್ ಬ್ಯಾಲೆ. ರೈತ ಕುಟುಂಬವೊಂದರ ಹುಡುಗಿಯ ಪ್ರೇಮದ ಕಥೆಯೆ ಇದರ ವಸ್ತು. ಶೇಕ್ಸ್‌ಪಿಯರ್‌ನ 'ಮಚ್ ಎಡೋ ವಿಹಾಟ್ ನಥಿಂಗ್' ನಾಟಕವನ್ನು ಆಧರಿಸಿ, 'ಲವ್ ಫಾರ್ ಲವ್ ಬ್ಯಾಲೆಯನ್ನು ನಿರ್ದೇಶಿಸಲಾಗಿದೆ.

ಬ್ಯಾಲೆ ಎಷ್ಟೇ ಭವ್ಯವಾಗಿದ್ದರೂ ಕಾಲ ಕ್ರಮೇಣ ಬದಲಾವಣೆಗಳನ್ನು ತನ್ನ ಒಡಲಲ್ಲಿರಿಸಿಕೊಂಡಿದೆ. 'ಬ್ಯಾಲೆ' ಎಲ್ಲಾ ಹೊಸ ತನವನ್ನು ಮೈಗೂಡಿಸಿಕೊಳ್ಳುವಲ್ಲಿ ಹಿಂದೆ ಬಿದ್ದಿದೆ ಎಂದು ಸೋವಿಯೆತ್ ವಿಮರ್ಶಕಾರರು ನುಡಿದಿದ್ದಾರೆ. ಇಡೀ ವಿಶ್ವದಲ್ಲಿ ಸೋವಿಯೆತ್ ದೇಶದಲ್ಲಿ ಮಾತ್ರವೇ ಬ್ಯಾಲೆ ಬೃಹತ್ತಾಗಿ ನೆಲೆಯೂರಿರುವುದರಿಂದ ನಮಗೆ ಸರಿಸಾಟಿ ಇಲ್ಲವೆಂಬಂತಾಗಿದೆ. ಇದರ ಪರಿಣಾಮವಾಗಿಯೇ ಹೊಸತನಕ್ಕೆ ನಮ್ಮನ್ನು ತೆರೆದುಕೊಳ್ಳುವಲ್ಲಿ ಹಿಂದೆ ಬಿದ್ದಿದ್ದೇವೆ. ಇತರೆಡೆ ಅಲ್ಲಿನ ನೃತ್ಯಗಳನ್ನು ಕಲಿಸಲು ಸಾವಿರಾರು ತರಬೇತಿ ಶಾಲೆಗಳಿವೆ. ಆದರೆ ಇಲ್ಲಿ ವೃತ್ತಿನಿರತರಾಗುವವರಿಗೆ ಮಾತ್ರವೇ ಬ್ಯಾಲೆ ಕಲಿಸಲಾಗುತ್ತಿದೆ. ಆಸಕ್ತರಿಗೆ ಬ್ಯಾಲೆ ಸಂಪೇತಿಯೇ ಇಲ್ಲ.' ಎಂದಿದ್ದಾರೆ.

ಬ್ಯಾಲೆಯ ಬೆಳವಣಿಗೆಯತ್ತ ಸೋವಿಯೆತ್ ದೇಶ ಅಪಾರ ಗಮನವಿಟ್ಟಿದೆ ತನ್ನ ಸಂಸ್ಕೃತಿಯನ್ನು ಕಾಯ್ದುಕೊಳ್ಳುವಲ್ಲಿ ಕಾಳಜಿ ವಹಿಸಿದೆ. ಆ ಸಂಸ್ಕೃತಿಯ ಕೆಲವು ತಂತುಗಳೇ ಕರ್ನಾಟಕದಲ್ಲೂ ಪ್ರದರ್ಶಿತವಾಗುತ್ತಿದೆ.

"ನಿಮ್ಮ ಕಲೆ ರಾಷ್ಟ್ರ ರಾಷ್ಟ್ರಗಳನ್ನು ಸಮೀಪಕ್ಕೆ ತರುತ್ತವೆ. ಇಡೀ ರಾಜತಾಂತ್ರಿಕ ಸಿಬ್ಬಂದಿಯಿಂದ ಆಗದ ಕೆಲಸವನ್ನು ನಿಮ್ಮ ಕಲೆ ಸಾಧ್ಯ ಮಾಡಿಕೊಟ್ಟಿದೆ" ಎಂದು ಮೆಕ್ಸಿಕೋದ ರಾಜತಾಂತ್ರಿಕ ರಾಷ್ಟ್ರದ ಜಾನಪದ ನೃತ್ಯಗಳನ್ನು ನೋಡಿದೊಡನೆಯೇ ಉಸುರಿದ. ರಾಷ್ಟ್ರದ ಜಾನಪದ ನೃತ್ಯಗಳಿಗೆ ಅಂತಹ ಶಕ್ತಿಯಿದೆ. ರಾಷ್ಟ್ರದ ಜಾನಪದ ನೃತ್ಯಗಳು ಬೆಡಗಿನ ಲೋಕಕ್ಕೆ ತೆರೆದ ಹೆಬ್ಬಾಗಿಲು.

'ಪಾಪ್'....ಪಾಪ್....ಪಾಪ್

ಜಿ. ಎನ್. ಮೋಹನ್

'ಸೋವಿಯೆತ್‌ನಲ್ಲಿ ಏನಿದೆ?' ಎಂದು ಮೂಗು ಮುರಿಯುತ್ತಿದ್ದವರು ಸೋವಿಯೆತ್ ಉತ್ಸವದಿಂದ ಬೆಚ್ಚಿಬಿದ್ದಿದ್ದಾರೆ. 'ಅಬ್ಬಾ! ರಷ್ಯದಲ್ಲಿ ಏನೆಲ್ಲಾ ಇದೆ' ಎಂಬ ಉದ್ಗಾರ ಅವರಿಂದಲೇ ಕೇಳಿ ಬರುತ್ತಿದೆ. ರಷ್ಯ ಕಬ್ಬಿಣದ ಕೋಟೆ ಎಂದು ಕೊಂಡಿದ್ದವರಿಗೆ ಸೋವಿಯೆತ್ ಉತ್ಸವವೇ ನೇರ ಉತ್ತರವಾಗಿದೆ. ಸೋವಿಯತ್ ದೇಶದ ಪಾಪ್ ರಾಕ್ ಜಾಸ್‌ಗಳು ತಲ್ಲಣವನ್ನುಂಟು ಮಾಡಿದೆ.

ಪಾಪ್ ಎಂದರೆ ಸಾಕು ಜನ ನುಗ್ಗಿ ಬೀಳುತ್ತಿದ್ದರು ಟಿಕೆಟ್ ಹಲವು ಪಟ್ಟು ಹೆಚ್ಚಿಗೆ ಮಾರಾಟವಾದುದ್ದು ಅದರ ಜನಪ್ರಿಯತೆಯನ್ನು ತೋರಿಸುತ್ತದೆ. ಬೆಂಗಳೂರಿನಲ್ಲಿ ಪಾಪ್ ಗಾಯನಕ್ಕೆಂದೇ ವಿಶೇಷ ಕಾರ್ಯಕ್ರಮವನ್ನೂ ಯೋಜಿಸಲಾಗಿತಲ್ಲದೆ ಹಲವು ಬಡಾವಣೆಗಳಲ್ಲೂ ಈ ಕಾರ್ಯಕ್ರಮವನ್ನು ಪ್ರದರ್ಶಿಸಲಾಯಿತು.

ತನ್ನ ನೆಲದ ಸಂಸ್ಕೃತಿಯಲ್ಲದ ಪಾಪ್ ರಾಕ್ ಜಾಸ್‌ಗಳಲ್ಲೂ ಸೋವಿಯೆತ್ ಮುಂದುವರಿದಿದೆ. ಪಾಶ್ಚಿಮಾತ್ಯದೇಶಗಳ ಸಂಸ್ಕೃತಿಯನ್ನು ಸೋವಿಯೆತ್ ದೇಶ ಹೇಗೆ ಜೀರ್ಣಿಸಿಕೊಳ್ಳಬಹುದು ಎಂಬುದನ್ನು ಇದು ತೋರಿಸುತ್ತದೆ.

ವ್ಯಾಲೆರಿ ಲಿಯಾನ್‌ಟೀವ್ ಹಾಗೂ ಅಲ್ಲಾ ಪುಗಚೇವ ಪಾಪ್ ಗಾಯನದ ಎರಡು ತಾರೆಗಳು. ಇತರೆ ದೇಶಗಳು ಸಹ ಈ ಇಬ್ಬರನ್ನು ಎಲ್ಲರ ನಿರೀಕ್ಷೆಗೂ ಮೀರಿದ ಗಾಯಕರೆಂದೇ ವರ್ಣಿಸಿದ್ದಾವೆ. ಫ್ರೆಂಚ್ ಪತ್ರಿಕೆ "ಅಲ್ಲಾ ಪುಗಚೇವರ ಗಾಯನದ ಭಾಷೆ ವಿಶ್ವದ ಭಾಷೆ" ಎಂದೇ ವರ್ಣಿಸಿದೆ. ಅಲ್ಲಾ ಪುಗಚೇವರ ಗಾಯನದ ಕ್ಯಾಸೆಟ್‌ಗಳು 90 ಮಿಲಿಯ ಸೆಟ್‌ಗಳು ಮಾರಾಟವಾಗಿದೆ. ಅಲ್ಲಾಪುಗಚೇವ ಸ್ವತಃ ಕವಿಯತ್ರಿಯೂ ಹೌದು. ತನ್ನ ಪ್ರದರ್ಶನಗಳಲ್ಲಿ ಆಕೆ ತಾವೇ ಸ್ವತಃ ಬರೆದ ಹಾಡುಗಳನ್ನೆ ಹಾಡುತ್ತಾರೆ.

"ನಾನುಹಾಡುವಾಗ ನಾನು ಹಾಡುವ ಹಾಡುಗಳ ಬಗ್ಗೆ ಎಚ್ಚರವಹಿಸುವತ್ತೇನೆ." ಎನ್ನುವ ಪುಗಚೇವ ಸೋವಿಯೆತ್ ದೇಶದ ಎಲ್ಲೆಡೆ, ಪಶ್ಚಿಮ ಜರ್ಮನಿ, ಫ್ರಾನ್ಸ್, ಇಟಲಿ, ಹಂಗೇರಿ, ಕ್ಯೂಬ, ಪೋಲೆಂಡ್, ಜಪಾನ್ ಸ್ವೀಡನ್ ಎಲ್ಲೆಡೆಯೂ ಪ್ರದರ್ಶನ ನೀಡಿ ಮೆಚ್ಚುಗೆ ಪಡೆದಿದ್ದಾರೆ. ನಾವು ಅಲ್ಲಾ ಪುಗಚೇವರನ್ನು ಸಂದರ್ಶಿಸಿಧಾಗ ಹಾಡು ಎಷ್ಟು ವಿಶಾಲವಾದದ್ದು ಅದು ದೇಶ ಹಾಗೂ ಶೈಲಿಗೆ ಹೊರತಾದದ್ದು. ದೆಹಲಿಯ ಉತ್ಸವದಲ್ಲಿ ನಾನು ಮೊದಲು ನನ್ನ ಹಾಡುಗಳನ್ನು ಅನುವಾದ ಮಾಡಿ ಹೇಳುತ್ತಿದ್ದೆ ಆದರೆ ಕ್ರಮೇಣ ಜನರ ಪ್ರತಿಕ್ರಿಯೆ ನೋಡಿದಾಗ ಈ ಅನುವಾದ ಅಗತ್ಯವಿಲ್ಲ ಎನಿಸಿತು. ಈಗ ನೇರ ನನ್ನ ಭಾಷೆಯಲ್ಲಿ ಹಾಡುತ್ತೇನೆ. ಅದು ಎಲ್ಲರಿಗೂ ಅರ್ಥವಾಗುತ್ತದೆ" ಎನ್ನುತ್ತಾರೆ. "ಮಕ್ಕಳು ಬದುಕಿನ ಕನ್ನಡಿ ಎನ್ನುವ ಇವರ ಹಾಡು ಜಯಭೇರಿ ಹೊಡೆದಿದೆ. ಅಲ್ಲಾ ಪುಗಚೇವ ಗಾಯನದ ಮೂಲಕ ಶಾಂತಿಗಾಗಿ ನೀಡಿರುವ ಕೊಡುಗೆಗಾಗಿ ಪುರಸ್ಕಾರ ನೀಡಲಾಗಿದೆ. ಅದನ್ನು ಪಡೆದಿರುವ ಪ್ರಪ್ರಥಮ, ಕಲಾವಿದೆ ಈಕೆ.

"ಲಿಯನ್‌ಟೀವ್ ಗಾಯನ ನನ್ನ ಮಗನ ಹಾಡಿದ್ದಂತೆ" ಎನ್ನುತ್ತಾರೆ ಪುಗಚೇವ. "ನಾನು ಹಾಡುಗಳಿಗಾಗಿ ಮಾತ್ರ ಹೆಸರಾಗಿಲ್ಲ ಹಾಡುಗಳಿಗೆ ಅಭಿನಯದ ಮೂಲಕ ಅರ್ಥ ಹೊಮ್ಮಿಸುವುದಕ್ಕೂ ಹೆಸರಾಗಿದ್ದೇನೆ" "ಎನ್ನುವ ಪಾಪ್ ಗಾಯಕ ಲಿಯನ್‌ಟೀವ್ ತುರ್ಗ್‌ನುನ್‌ರವರ" "ಗಿಟಾರ್ ವಾದಕನ ನೆನಪಿನಲ್ಲಿ" ಎನ್ನುವ ಹಾಡು ಹಾಡಿದಾಗ ಸ್ಥಬ್ದರಾದವರು ಹಲವರಿದ್ದಾರೆ. ಲಿಯನ್‌ಟೀವ್‌ರವರ ಗಾಯನ ಎದೆಯಲ್ಲಿನ ಒಂದು ಬಿರುಕಿನಂತೆ ನೋವ ತುಳುಕಿಸಬಲ್ಲದು ಎಂದು ಸೋವಿಯೆತ್‌ನ ಖ್ಯಾತ ಅಲೆಕ್ಸಾಂಡ್ರು ಪಕ್‌ಮುತೋವಾ ವರ್ಣಿಸಿದ್ದಾರೆ.

"ನಾನು ಬದುಕಿನ ಉತ್ಸಾಹವನ್ನು ಯುವಜನರೆಡೆ ಒಯ್ಯುವುದಕ್ಕಾಗಿ ಹಾಡುತ್ತೇನೆ" ಎನ್ನುವ ಲಿಯನ್‌ಟೀವ್ ಪ್ರದರ್ಶನಗಳ ಅಪಾರ ಪ್ರಶಂಸೆ ಪಡೆದಿದೆ.

ಇಷ್ಟೆಲ್ಲಾ ಪ್ರಶಂಸೆಗಳಿಸಿದ ಪಾಪ್ ಗಾಯನ ರಷ್ಯದಲ್ಲಿ ಹೇಗೆ ನೋಡಲಾಗಿದೆ ಎಂಬುದೇ ಕುತೂಹಲಕರವಾದದ್ದು. ಪಾಪ್, ರಾಕ್, ಜಾಸ್ ಇವು ಯುವಜನರ ಹಾಡುಗಳು. ಯುವಜನರಲ್ಲದೆ ಬೇರೆ ಯಾರೂ ಇದನ್ನು ಹೆಚ್ಚು ಹಚ್ಚಿಕೊಳ್ಳಲು ಸಾಧ್ಯವಿಲ್ಲ. ಬ್ರೇಕ್ ಡ್ಯಾನ್ಸ್ ಇಂದು ಹೆಚ್ಚು ಜನಪ್ರಿಯವಾಗಿದೆ. ಬ್ರೇಕ್ ಡ್ಯಾನ್ಸ್ ವೃದ್ಧರು ಮಾಡಲು ಸಾಧ್ಯವಿಲ್ಲವೃದ್ಧರಿಂದ ತಮ್ಮನ್ನು ಬೇರ್ಪಡಿಸಿಕೊಂಡು ಗುರುತಿಸಲೆಂದೇ ಬ್ರೇಕ್ ಡ್ಯಾನ್ಸ್ ಹೆಚ್ಚು ಬಳಕೆಯಲ್ಲಿದೆ. ಹಾಗೆಯೇ ಈ ಪಾಪ್ ಸಹ. ಇದು ಯುವಜನರಿಗೆ ಬಿಟ್ಟದ್ದು. ಇಡೀ ವಿಶ್ವದ ಯುವಜನರನ್ನು ಪಾಪ್ ಎಂಬುದರಿಂದ ಗುರುತಿಸಲು ಸಾಧ್ಯವಾದರೆ ಇಲ್ಲಿಯ ಯುವಜನರೂ ಅದರಲ್ಲಿ ಸೇರುತ್ತಾರೆ" ಎಂದು ನ್ಯೂಟೈಮ್ಸ್ ವರದಿ ಮಾಡಿದೆ.

ಜಾನಪದ ನೃತ್ಯಗಳು

80ರ ದಶಕದಲ್ಲಿಯೂ ಸೋವಿಯೆತ್‌ನಲ್ಲಿ ಜಾನಪದ ನೃತ್ಯಗಳು ಸಾಕಷ್ಟು ಪ್ರಸಿದ್ಧವಾಗಿವೆ. ಜಾನಪದ ಗೀತೆಯ ಭಾವವನ್ನು, ಮಾಧುರ್ಯವನ್ನು ದೃಶ್ಯ ಮಾಧ್ಯಮದಲ್ಲಿ ಅಭಿವ್ಯಕ್ತಗೊಳಿಸುವ ಕಲಾಪ್ರಕಾರವದು. ಜಾನಪದ ನೃತ್ಯಗಳು ಒಂದು ರಾಷ್ಟ್ರದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುತ್ತವೆ. ಪ್ರಾಯಃ ರಷ್ಯಾದಲ್ಲಿ ಜನ ಜಾನಪದ ನೃತ್ಯದ ಬೆಡಗು ಗೋಚರಿಸದಿರುವ ಒಂದೇ ಒಂದು ಸ್ಥಳವಿರಲಾರದು ಅನಿಸುತ್ತದೆ. 16 ನೇ ಹಾಗೂ 17 ನೇ ಶತಮಾನದಲ್ಲಿ ಕ್ರೈಸ್ತ ಚರ್ಚ್ ವಿಧಿಸಿದ ನಿರ್ಬಂಧಗಳ ಪರಿಣಾಮವಾಗಿ ಸೋವಿಯತ್‌ನ ಜಾನಪದನೃತ್ಯ ಕಲೆಸಾಕಷ್ಟು ಅಭಿವೃದ್ಧಿ ಸಾಧಿಸಲಾಗಲಿಲ್ಲ. ಗಾಯನ ಮತ್ತು ನೃತ್ಯ ಪೈಶಾಚಿಕ ಮನೋರಂಜನೆಗಳೆಂದು ಚರ್ಚ್ ಪರಿಗಣಿಸಿತ್ತು.

ಕಾಲ ಕ್ರಮೇಣ ಜೀವನದ ರೀತಿ ನೀತಿಗಳು ಬದಲಾಗುತ್ತಿದ್ದಂತೆ ನೃತ್ಯದ ಸ್ಥಿತಿಗತಿಯೂ ಬದಲಾಯಿತು. ರಷ್ಯಾದ ಮಹಾ ಕ್ರಾಂತಿಯ ವಿಜಯದ ತರುವಾಯ ಅಸ್ತಿತ್ವಕ್ಕೆ ಬಂದ ಸೋವಿಯತ್ ಆಡಳಿತ ವೃತ್ತಿಪರ ಜಾನಪದ ನೃತ್ಯ ಮೇಳಗಳ ಹುಟ್ಟಿಗೆ ಪ್ರೇರಣೆ ನೀಡಿತು. ಇದರ ಪರಿಣಾಮವಾಗಿಯೇ 1937 ರಲ್ಲಿ ಮ್ಯೊಸಿಯೆವ್ ಕಂಪನಿ ಅಸ್ತಿತ್ವಕ್ಕೆ ಬಂದಿತು. ಅದರ ಸ್ಥಾಪಕ ಐಗೂರ್ ಮ್ಯೊಸಿಯುವ್ ಹಿಂದೆ ಬೊಲ್ಶೊಯಿ ರಂಗ ಭೂಮಿಯಲ್ಲಿ ನೃತ್ಯ ಕಲಾವಿದನಾಗಿದ್ದ. ನಾಟ್ಯಶಾಸ್ತ್ರದ ವಿಶಿಷ್ಟ ಲಕ್ಷಣಗಳನ್ನು ಜಾನಪದ ನೃತ್ಯಗಳಲ್ಲಿ ಅಳವಡಿಸಿಕೊಂಡು ಹೊಸ ನೃತ್ಯ ಶೈಲಿಯನ್ನು ರೂಪಿಸುವ ನಿಟ್ಟಿನಲ್ಲಿ ಮ್ಯೊಸಿಯೆವ್ ಯಶಸ್ವಿಯಾದ. 90 ರ ಹರೆಯದಲ್ಲಿರುವ ಈ ಕಲಾವಿದ ನಮ್ಮ ಕಾರಂತರಂತೆ ಇಂದಿಗೂ ಕ್ರಿಯಾಶೀಲರಾಗಿದ್ದಾರೆ.

ಅಸದೃಶ ಕಲೆಗಾರಿಕೆ

ಬೆರಿಯೋಜ್ಕಾ (ಭೂರ್ಜ ವೃಕ್ಷ) ಸೋವಿಯತ್‌ನ ಅತ್ಯಂತ ಜನಪ್ರಿಯ ಜಾನಪದನೃತ್ಯತಂಡಗಳಲ್ಲಿರಷ್ಯನ್‌ನೃತ್ಯಗಳೇ ಅಧಿಕ. ಸಾಂಪ್ರದಾಯಿಕ ನೃತ್ಯ ಶೈಲಿಯನ್ನು ಅನುಕರಿಸುವ ಬದಲು ಜಾನಪದದ ಅಂತರ್ಭಾವವನ್ನು ಮೈಗೂಡಿಸಿಕೊಂಡು ಸ್ವಂತ ನಾಟ್ಯ ಶೈಲಿಯನ್ನು ಅದು ರೂಪಿಸಿಕೊಂಡಿದೆ. 1948 ರಲ್ಲಿ ಈ ನೃತ್ಯ ಮೇಳ ಅಸ್ತಿತ್ವಕ್ಕೆ ಬಂದಿತು. ಆ ವರ್ಷ ಹವ್ಯಾಸಿ ನೃತ್ಯ ಕ್ಲಬ್‌ನ 20 ಯುವತಿಯರು ಮಾಸ್ಕೋದ ಹರ್ಮಿಟಾಜ್ ಥಿಯೇಟರ್‌ನಲ್ಲಿ ಸುಪ್ರಸಿದ್ಧ ರಷ್ಯನ್ ಜಾನಪದ ಗೀತೆಯ ರಾಗ ಲಯಕ್ಕನುಗುಣವಾಗಿ ಬೆರಿಯೋಜ್ಕಾ ನೃತ್ಯ ಪ್ರದರ್ಶಿಸಿದರು. ಈ ನೃತ್ಯ ಬಹಳ ಜನಪ್ರಿಯವಾಯಿತು. ರಷ್ಯಾದ ಸಂಸ್ಕೃತಿಯ ಆತ್ಮವನ್ನು ತೆರೆದು ತೋರುವ ಅಸದೃಶ ಕಲೆಗಾರಿಕೆ ಈ ನೃತ್ಯ ಶೈಲಿಯಲ್ಲಿ ಅಡಗಿದೆ ಎಂದು ಕಲಾ ವಿಮರ್ಶಕರೊಬ್ಬರು ಹೇಳಿದ್ದಾರೆ. ರಷ್ಯಾದ ಮಹಿಳೆಯ ಲಾವಣ್ಯ, ಮನೋಹರತೆಯನ್ನು ಕಣ್ಣ ಮುಂದೆ ಕಟ್ಟುವಂತೆ ನಿರೂಪಿಸುವ ಸಾಮರ್ಥ್ಯ ಈ ನೃತ್ಯ

(ಪುಟ 5ನೇ ನೋಡಿ)

[4ನೇ ಪುಟದಿಂದ]

ಕ್ಕಿದೆ.

ಕೆಲವು ಜಾನಪದ ನೃತ್ಯಗಳ ವೈವಿಧ್ಯತೆ ನಮ್ಮನ್ನು ವಿಸ್ಮಯ ಚಕಿತಗೊಳಿಸುತ್ತದೆ. ಅಭಿನಯವೂ ಮೇಳೈಸಿದ "ಪೆನ್" ಎಂಬ ನೃತ್ಯವಿದೆ. ನರ್ತಕ ಅಥವಾ ನರ್ತಕಿ ತಮ್ಮ ನೃತ್ಯದ ಲಾಸ್ಯದಲ್ಲಿ ಹಂಸದ ಚಲನೆಯನ್ನು ಅನುಕರಿಸುವುದರೊಂದಿಗೆ ರಷ್ಯನ್ ಯುವತಿಯ ಚೆಲುವು, ಲಾವಣ್ಯ ಕೋಮಲತೆಯೂ ಈ ನೃತ್ಯದಲ್ಲಿ ಸಾಮರಸ್ಯ ಹೊಂದಿರುವುದು ನೃತ್ಯದ ವೈಶಿಷ್ಟ್ಯವಾಗಿದೆ.

ರಿಂಗ್‌ಡ್ಯಾನ್ಸರ್ ಅಥವಾ ವರ್ತುಲ ನೃತ್ಯ ಪ್ರವೀಣೆಯರು ರಷ್ಯನ್ ಜಾನಪದ ನೃತ್ಯಗಳ ಇನ್ನೊಂದು ಆಕರ್ಷಕ ಅಂಗ. ಕ್ರೈಸ್ತ ಧರ್ಮ ಆರಂಭ ಕಾಲದ ಮತ ಧರ್ಮ ಕ್ರಿಯಾ ವಿಧಿಗಳು ಈ ನೃತ್ಯದ ಶೈಲಿಯ ಮೇಲೆ ಪ್ರಭಾವ ಬೀರಿದವು.

ರಷ್ಯನ್ ಕ್ವಡ್ರಿಲ್ (ಚೌಕಕುಣಿತ) ಇನ್ನೊಂದು ಬಗೆಯ ಜಾನಪದ ನೃತ್ಯ. ರಷ್ಯಾದಲ್ಲಿ ಯಾವುದೇ ಮನರಂಜನಾ ಕಾರ್ಯಕ್ರಮಗಳಾಗಲಿ, ಸತ್ಕಾರ ಕೂಟಗಳಾಗಲಿ ಅತ್ಯಂತ ಚೇತೋಹಾರಿಯಾದ ಈ ನೃತ್ಯವಿಲ್ಲದೆ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಆದರೆ ಸೋವಿಯತ್‌ನ ಈ ನೃತ್ಯ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಕಷ್ಟು ಭಿನ್ನತೆಯಿದೆ. ಭಾಗವಹಿಸುವ ನರ್ತಕಿಯರ ಸಂಖ್ಯೆ ಅವರು ಇರಿಸುವ ಹೆಜ್ಜೆಗಳ ಸಂಖ್ಯೆಯಲ್ಲಿ ಈ ಭಿನ್ನತೆ ವ್ಯಕ್ತವಾಗುತ್ತದೆ.

ಖೊರೊಕ್ ನೃತ್ಯ

ಮೊಲ್ಡಾವಿಯಾದ 'ಖೊರೊಕ್' ಇನ್ನೊಂದು ವಿಶಿಷ್ಟ ಜಾನಪದ ನೃತ್ಯ. ಈ ನೃತ್ಯ ಶೈಲಿಗೆ 'ಖೋರಾ' ಎಂದು ಹೆಸರಿದೆ. (ಖೋರಾ ಗ್ರೀಕ್‌ಪದ ವರ್ತುಲ ಕುಣಿತ ಎಂದು ಅರ್ಥ) ಮೊಲ್ಡಾವಿಯಾದ ಜನತೆಯ ಪೂರ್ವಜರೆನಿಸಿದ ಥ್ರೇಸಿಯನ್‌ರಿಂದ ಗ್ರೀಕರು ಈ ಪದ ಬಳಸಿಕೊಂಡರು. ನರ್ತಕರು ಮತ್ತು ನರ್ತಕಿಯರು ತಮ್ಮ ತೋಳುಗಳನ್ನು ಪರಸ್ಪರ ಭುಜದ ಮೇಲೆ ಹಾಕಿ ವರ್ತುಲವಾಗಿ ಕುಣಿಯುವುದು ಈ ನೃತ್ಯ ಶೈಲಿಯ ವೈಶಿಷ್ಟ್ಯ. ದುಷ್ಟ ಶಕ್ತಿಗಳೂ ಜೀವದ ಕೇಂದ್ರ ಭಾಗವನ್ನು ಒಳ ಪ್ರವೇಶಿಸದಂತೆ ತಡೆಗಟ್ಟುವುದು ಈ ನೃತ್ಯದ ಉದ್ದೇಶ. ಮೊಲ್ಡಾವಿಯಾದ ಸ್ಥಳೀಯ ಕೋಟೆಗಳ ಶಿಲ್ಪ ಶೈಲಿ ವಿನ್ಯಾಸವಾಗಲು ಈ ವಿಚಾರ ಸ್ಫೂರ್ತಿ ನೀಡಿತು. ಅವುಗಳಲ್ಲಿ ಕೆಲವು ಕೋಟೆಗಳು ಇಂದಿಗೂ ಉಳಿದಿವೆ. ●

ಇ.ಎಂ.ಎಸ್.ರವರ ಪ್ರಶ್ನೋತ್ತರ

ಕಾಂಗ್ರೆಸ್(ಐ), ಕೋಮುವಾದಿಗಳ ವಿರುದ್ಧ ಐಕ್ಯತೆ ಈಗಿನ ಪ್ರಧಾನ ಕೆಲಸ

ಮೊದಲನೇ ಪ್ರಶ್ನೆಕಾರನು ಹೇಳುವಂತೆ ಬಿ.ಜೆ.ಪಿ.ಯೊಡನೆ ಎಡಪಕ್ಷಗಳು ಹೊಂದಾಣಿಕೆ ಮಾಡಬೇಕೆಂದು ಎಲ್ಲಾ ವಿರೋಧ ಪಕ್ಷಗಳೂ ಹೇಳುವುದಿಲ್ಲ: ಅವುಗಳಲ್ಲಿ ಈ ಬಗ್ಗೆ ಅಭಿಪ್ರಾಯ ವ್ಯತ್ಯಾಸಗಳಿವೆ. ಉದಾ : ಹರ್ಯಾಣಾ ಮುಖ್ಯಮಂತ್ರಿ ಸೇರಿಸಿದ ಸೂರಜ್ ಕುಂಡ್ ಸಭೆಯಲ್ಲಿ ಎಡ ಪಕ್ಷಗಳು ಭಾಗವಹಿಸುದಿಲ್ಲವೆಂದು ಗೊತ್ತಿದ್ದರೂ ಜನತಾ, ತೆಲುಗು ದೇಶಂ, ವಿ.ಪಿ.ಸಿಂಗ್‌ರ ಜನಮೋರ್ಚಾ ಮತ್ತಿತರ ಪಕ್ಷಗಳು ಭಾಗವಹಿಸಿದವು. ಬಿ.ಜೆ.ಪಿ.ಯೂ ಇತ್ತು. ಆದ್ದರಿಂದ ಈ ಸಭೆಯಲ್ಲಿ ಭಾಗವಹಿಸಿದ ಪಕ್ಷಗಳು ಬಿ.ಜೆ.ಪಿ. ಜತೆ ಸೇರಿ ಎಡ ಪಕ್ಷಗಳಿಲ್ಲದ ಒಂದು ವಿರೋಧಿರಂಗ ರೂಪಗೊಳ್ಳಬಹುದೆಂದು ಹಲವರು ಬಗೆದರು. ಪತ್ರಿಕೆಗಳಲ್ಲಿ ಅದೇ ಧಾಟಿಯ ಲೇಖನಗಳೂ ಬಂದವು.

ಶ್ರವಿಸಿದ್ದವು. ಲೋಕದಳ ಮುಖಂಡರಾದ ಬಹುಗುಣ, ಕರ್ಪೂರಿ ಠಾಕೂರ್, ಜನತಾದ ಚಂದ್ರಶೇಖರ್, ರಾಮಕೃಷ್ಣ ಹೆಗ್ಗಡೆ, ಸಿ.ಪಿ.ಐ.(ಎಂ) ನಿಂದ ಸುರ್ಜಿತ್ ಮತ್ತು ನಾನು, ಸಿ.ಪಿ.ಐ.ನ ರಾಜೇಶ್ವರರಾವ್ ಹಾಗೂ ಡಾ.ಅಹ್ಮದ್ ಭಾಷಣ ಮಾಡಿದರು. ಬಿ.ಜೆ.ಪಿ. ಈ ರ‍್ಯಾಲಿಯಲ್ಲಿ ಭಾಗವಹಿಸಿರಲಿಲ್ಲ. ಉತ್ತರ ಪ್ರದೇಶ ಆಳುವ ಪಕ್ಷದ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಹೋರಾಟಕ್ಕೆ ಜನತೆಯನ್ನು ಅಣಿಗೊಳಿಸಲು ಅಲ್ಲಿ ಕರೆ ನೀಡಲಾಯಿತ್ತು. ಕಾಂಗ್ರೆನಂತೆ ಬಿ.ಜೆ.ಪಿ.ಯನ್ನು ಹೊರಗಿಟ್ಟು ಉತ್ತರ ಪ್ರದೇಶದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯುತ್ತಿರುವುದಕ್ಕೆ ಇದೊಂದು ಉದಾಹರಣೆ.

ಬಿ.ಜೆ.ಪಿ. ಮತ್ತಿತರ ಜಾತೀವಾದೀ ಕೋಮುವಾದಿ ಪಕ್ಷಗಳ ಬಗ್ಗೆ ದೃಢ ನಿಲುವು ಹೊಂದಿರುವ ಎಡ ಪಕ್ಷಗಳು

ವಣೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದೇ ಎಡ ಪಕ್ಷಗಳ ಸಾಮರ್ಥ್ಯವಾಗಬೇಕಾಗಿದೆ.

ಎರಡನೇ ಪ್ರಶ್ನೆ. ವಿ.ಪಿ. ಸಿಂಗ್‌ರ ಭಿನ್ನಮತೀಯ ಗುಂಪು ಪ್ರಜಾಪ್ರಭುತ್ವವಾದೀ ವಿರೋಧ ಪಕ್ಷಗಳೊಟ್ಟಿಗೆ ಹೊಸದಾಗಿ ಸೇರಿಕೊಂಡಿದೆ. ಇದು ಕಾಂಗ್ರೆ ಪಕ್ಷದಲ್ಲಿಯೇ ಇದ್ದು, ಕಾಂಗ್ರೆನ ಧೋರಣೆಗಳ ಬಗ್ಗೆ ಅತೃಪ್ತಿ ಹೊಂದಿರುವವರ ಗುಂಪು. ಅವರ ನಿಲುವು ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳನ್ನು ಬಲಪಡಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಆದರೆ ನಿನ್ನೆಯವರೆಗೆ ಕಾಂಗ್ರೆ ಪಕ್ಷದಲ್ಲಿದ್ದು ಅತೃಪ್ತರಾಗಿ ಇವರೇ ಹೊರಬಂದರೋ, ಅಥವಾ ಹೊರದೂಡಲ್ಪಟ್ಟರೋ ಹಲವು ಧೋರಣೆಗಳ ಬಗ್ಗೆ ಇವರಿಗೆ ತಮ್ಮದೇ ಆದ ನಿಲುವುಗಳಿವೇ

ಪ್ರಶ್ನೆ 1 : ರಾಜೀವಗಾಂಧಿ ಸರ್ಕಾರವನ್ನು ಅಧಿಕಾರದಿಂದಿಳಿಸಲು ಬಿ.ಜೆ.ಪಿ.ಯ ಜೊತೆಗೆ ಹೊಂದಾಣಿಕೆ ಮಾಡಬೇಕೆಂದು ಇತರ ವಿರೋಧ ಪಕ್ಷಗಳವರು ಹೇಳುತ್ತಿದ್ದಾರೆ. ಇದಕ್ಕೆ ಬದಲಾಗಿ ಸಿ. ಪಿ. ಐ. (ಎಂ) ಕೋಮುವಾದದ ವಿರುದ್ಧ ನಿಲುವು ತಳೆದಿರುವುದರಿಂದ ರಾಜೀವ್‌ಗಾಂಧಿ ವಿರುದ್ಧ ಮೂರನೇ ಶಕ್ತಿಯಾಗಲು ಎಡ ಪಕ್ಷಗಳಿಗೆ ಸಾಧ್ಯವಿಲ್ಲವೇ ? ಇದು ಸಾಧ್ಯವಾಗಲು ಉತ್ತರ ಭಾರತದಲ್ಲಿ ಎಡ ಶಕ್ತಿಗಳ ಶಕ್ತಿ ವೃದ್ಧಿಯಾಗುವುದೇ ? ಹಾಗಾದಾಗ ಎಡ ಪಕ್ಷಗಳು ಅಧಿಕಾರಕ್ಕೆ ಬರಲು ಸಾಧ್ಯವೇ ?

ಪ್ರಶ್ನೆ 2 : ವಿ. ಪಿ. ಸಿಂಗರ ಮೋರ್ಚಾ ಎಡದತ್ತನಾಲಿರುವ (ಲೆಫ್ಟ್ ಆಫ್ ಸೆಂಟರ್) ಸಂಘಟನೆಯೆಂದು ಹೇಳಲಾಗುತ್ತಿದೆ. ವಿ.ಪಿ. ಸಿಂಗರು ಕೂಡ ಎಡಪಂಥದ ಛಾಯೆಯೇ ಇಲ್ಲದೆ ಕೇವಲ ಭಾರತದ ದಾರಿದ್ರ್ಯದ ಬಗ್ಗೆ ಟೊಳ್ಳುಮಾತನ್ನಾಡುವ ಇತರ ರಾಜಕೀಯ ಮುಖಂಡರಂತೆಯೇ ಅಲ್ಲವೇ ? ಭಾರತದ ಆಳುವ ವರ್ಗಗಳ ವಿರುದ್ಧ, ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಎಡ ಪಕ್ಷಗಳು ತಳೆಯುವ ನಿಲುವನ್ನು ಒಪ್ಪಿಕೊಂಡು ಎಡ ಪಕ್ಷಗಳ ಜತೆಗೆ ಹೆಜ್ಜೆಯಿಡಲು ಅವರಿಗೆ ಸಾಧ್ಯವೇ ?

ಆದರೆ ಇದಾದ ಮೂರುವಾರಗಳಲ್ಲೇ ಎಡ ಪಕ್ಷಗಳ ನೇತೃತ್ವದಲ್ಲಿ ನಡೆದ ಕೋಮುವಾದ ವಿರೋಧಿ ಸಮಾವೇಶದಲ್ಲಿ ಸೂರಜ್‌ಕುಂಡ್ ಸಭೆಯಲ್ಲಿ ಭಾಗವಹಿಸಿದ ಹಲವು ಮುಖಂಡರು ಭಾಗವಹಿಸಿದರು. ಸೂರಜ್‌ಕುಂಡ್ ಸಭೆ ಕರೆದ ಹರ್ಯಾಣಾ ಮುಖ್ಯಮಂತ್ರಿಯವರ ಲೋಕದಳ (ಬಿ) ದ ಬಹುಗುಣ ಕೂಡಾ ಭಾಗವಹಿಸಿದರು.

ಬಿ.ಜೆ.ಪಿ. ಹಾಗೂ ಇತರ ಕೋಮುವಾದಿ ಪಕ್ಷಗಳನ್ನು ಸಮಾವೇಶದಲ್ಲಿ ಖಂಡಿಸಲಾಯಿತು. ಸೂರಜ್‌ಕುಂಡ್ ಸಭೆಯಲ್ಲಿ ಎಡ ಪಕ್ಷಗಳು ಭಾಗವಹಿಸಲಿಲ್ಲ. ಆದರೆ ಈ ಸಮಾವೇಶದಲ್ಲಿ ಎಡ ಪಕ್ಷಗಳೊಡನೆ ಹೆಚ್ಚು ಸಂಪರ್ಕವಿರುವ ಪಕ್ಷಗಳು ಭಾಗವಹಿಸಿದವು.

ಇದಾದ ಮೂರು ದಿನಗಳಲ್ಲಿ ಉತ್ತರ ಪ್ರದೇಶದ ರಾಜಧಾನಿ ಲಕ್ನೋನಲ್ಲಿ ಅಭೂತಪೂರ್ವ ರ‍್ಯಾಲಿ ಹಾಗೂ ಬಹಿರಂಗ ಸಭೆ ನಡೆಯಿತು. ಇದನ್ನು ಯಶಸ್ವಿಗೊಳಿಸಲು ಲೋಕದಳದ ನೇತೃತ್ವದಲ್ಲಿ ಎಡ ಪಕ್ಷಗಳೂ

ಇಂತಹ ಯಾವುದೇ ದೃಢ ನಿಲುವು ಇಲ್ಲದ ಇತರ ವಿರೋಧ ಪಕ್ಷಗಳೊಂದಿಗೆ ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆ ವಿರುದ್ಧ ಹೋರಾಟಕ್ಕೆ ಅಣಿಯಾಗಿದ್ದ ಈ ಎರಡು ವಿಭಾಗಗಳು ನಿರ್ದಿಷ್ಟ ಪ್ರಶ್ನೆಗಳ ಮೇಲೆ ಒಟ್ಟಾಗಿ ಹೋರಾಡುವುದು ಮತ್ತು ಇತರ ವಿರೋಧ ಪಕ್ಷಗಳು ಕೋಮುವಾದೀ–ವಿಚ್ಛಿದ್ರಕಾರೀ ಶಕ್ತಿಗಳ ಸ್ಪಷ್ಟ ನಿಲುವು ತಳೆಯುವಂತೆ ಮಾಡುವುದು–ಇವೇ ಎಡ ಪಕ್ಷಗಳು ಮಾಡುತ್ತಿರುವ ಕೆಲಸ.

ಇದರ ಪರಿಣಾಮವಾಗಿ ಮುಂದಿನ ಚುನಾವಣೆಯಲ್ಲಿ ಏನಾಗಬಹುದೆಂದು ಹೇಳುವುದು ಈಗಲೇ ಸಾಧ್ಯವಿಲ್ಲ. ಅದರ ಆವಶ್ಯಕತೆಯೂ ಇಲ್ಲ. ಕೋಮುವಾದಿ, ವಿಚ್ಛಿದ್ರಕಾರಿಗಳ ಮತ್ತು ಕಾಂಗ್ರೆಸ್ (ಐ) ವಿರುದ್ಧ ಎಲ್ಲಾ ವಿರೋಧ ಪಕ್ಷಗಳ ಐಕ್ಯತೆ ಬೆಳೆಸುವುದೇ ಈಗ ಪ್ರಧಾನ ಕೆಲಸ. ಈ ನಡುವೆ ಹಲವು ಬದಲಾವಣೆಗಳು ಕಂಡುಬರಬಹುದು ; ರಾಜಕೀಯ ಸನ್ನಿವೇಶವೇ ಬದಲಾಗಬಹುದು. ಇಂತಹ ಬದಲಾ

ಇತ್ಯಾದಿ ಹಲವಾರು ಪ್ರಶ್ನೆಗಳು ಏಳಬಹುದು. ಎಡ ಪಕ್ಷಗಳೊಂದಿಗೆ ಹಲವಾರು ವಿಷಯಗಳಲ್ಲಿ ಭಿನ್ನಾಭಿಪ್ರಾಯವಿರುವ ಇವರಿಗೆ ಸಂಪೂರ್ಣವಾಗಿ ಎಡ ಪಕ್ಷಗಳ ಜೊತೆ ಸೇರಲು ಸಾಧ್ಯವಾಗದೇನೂ ಇರಬಹುದು. ಈ ಸಮಸ್ಯೆಗೆ ಜಂಟಿ ಕಾರ್ಯಾಚರಣೆ ಮತ್ತು ಪರಸ್ಪರ ಚರ್ಚೆಗಳಿಂದ ಪರಿಹಾರ ಕಂಡುಕೊಳ್ಳಬಹುದು.

ಎರಡನೇ ಪ್ರಶ್ನೆಕಾರ ಹೇಳಿರುವ ವಿ.ಪಿ.ಸಿಂಗ್‌ರವರ ಅಭಿಪ್ರಾಯ ಅವರ ಈ ನಿಲುವನ್ನು ತಳೆಯುವ ಸೂಚನೆಯಾಗಿದೆ. ಎಡ ಪಕ್ಷಗಳ ಜೊತೆಗೆ ಸಾಧ್ಯವಾದಷ್ಟು ಹೊಂದಾಣಿಕೆ ಮಾಡಿಕೊಂಡು ಮುಂದುವರಿಯುವ ಇಚ್ಛೆಯನ್ನು ನಾವಿಲ್ಲಿ ಕಾಣಬಹುದು.

ಸಂಗ್ರಹ :

ಇ.ಕೆ.ಎನ್.ರಾಜನ್

(ದೇಶಾಭಿಮಾನಿಯಿಂದ)

ಪಂಜಾಬಿನಲ್ಲಿ

ಖಲಿಸ್ತಾನ್ ಉಗ್ರವಾದಿಗಳಿಂದ ಸಿಪಿಐ [ಎಂ]ಕಾರ್ಯಕರ್ತರ ಕೊಲೆ

ಪಂಜಾಬಿನಲ್ಲಿ ದಿನಾಂಕ27.12.87 ರಂದು ಕಾ.ಕಾಶೀರ್‌ಸಿಂಗ್, ಚರಣ್‌ಜತ್‌ಸಿಂಗ್‌ರವರನ್ನು ಅಮೃತಸರ ಜಿಲ್ಲೆ ಖಲಿಸ್ತಾನ್ ಉಗ್ರವಾದಿಗಳು ಗುಂಡಿಟ್ಟು ಕೊಂದಿದ್ದಾರೆ.

ಕಾ.ಕಾಶ್ಮೀರ್‌ಸಿಂಗ್‌ರವರು ಅಮೃತಸರ ಜಿಲ್ಲೆ ಬಟ್ಟಿಕಾ ಗ್ರಾಮದ ಸಿ.ಪಿ.ಐ.(ಎಂ)ನ ಸಕ್ರೀಯ ಕಾರ್ಯಕರ್ತರಾಗಿ ಖಲಿಸ್ತಾನ್ ಉಗ್ರವಾದಿಗಳ ವಿರುದ್ಧ ಸಿ.ಪಿ.ಐ (ಎಂ) ನಡೆಸಿದ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಇವರಿಗೆ 2 ಗಂಡು ಹಾಗೂ 1 ಹೆಣ್ಣು ಮಕ್ಕಳು ಮತ್ತು ಹೆಂಡತಿ ಇದ್ದಾರೆ. ಕಳೆದವರ್ಷ ಕಾಶ್ಮೀರ್‌ಸಿಂಗ್‌ರವರ ಮನೆಗೆ ಉಗ್ರಗಾಮಿಗಳು ನುಗ್ಗಿ ಸಿ.ಪಿ.ಐ.(ಎಂ)ನ ಹೋರಾಟದಲ್ಲಿ ಮುಂದುವರೆದರೆ ಕೊಲೆ ಮಾಡುವುದಾಗಿ ಬೆದರಿಸಿ ಅವರ ಮನೆಯಿಂದ 25ಸಾವಿರ ರೂಪಾಯಿಮತ್ತು ಒಡವೆಗಳನ್ನು ದೋಚಿದ್ದರು. ಕಾಶ್ಮೀರ್‌ಸಿಂಗ್‌ರವರು ಇವರ ಬೆದರಿಕೆಗೆ ಮಣಿಯದೆ ಧೀರೋದ್ದಾತ ಹೋರಾಟ ನಡೆಸುತ್ತಾ ಸೆಪ್ಟಂಬರ್ ಪಿಕೆಟಿಂಗ್ ಚಳುವಳಿ ಹಾಗೂ ಡಿ.9ರ ದೆಹಲಿ ರ‍್ಯಾಲಿಯುಲ್ಲಿ ಭಾಗವಹಿಸಿದ್ದರು.

ಎರಡನೆಯುವರಾದ ಚರಣಜಿತ್ ಸಿಂಗ್‌ರವರು ಸೆರಾಯ್ ಗ್ರಾಮದ ಡಿ.ವೈ.ಎಫ್.ಐ.ನ ಸಕ್ರೀಯ ಕಾರ್ಯಕರ್ತರಾಗಿದ್ದರು. ಅಮೃತಸರ ಜಿಲ್ಲೆಯ ಕಿಸಾನ್ ಸಭಾ ಅಧ್ಯಕ್ಷರಾದ ನಜಾರ್ ಸಿಂಗ್‌ರವರನ್ನು ಹುಡುಕಿಕೊಂಡು ಉಗ್ರವಾದಿಗಳು ಬಂದಿದ್ದರು. ನಜಾರ್‌ಸಿಂಗ್‌ರವರು ಜಲಂದರ್‌ನಲ್ಲಿ ನಡೆಯುತ್ತಿರುವ ಕಿಸಾನ್‌ಸಭಾ ಸಮ್ಮೇಳನಕ್ಕೆ ಹೋದುದರಿಂದ ಕುಪಿತರಾದ ಉಗ್ರವಾದಿಗಳು ಚರಣ್‌ಜಿತ್‌ರವರನ್ನು ಗುಂಡಿಟ್ಟು ಕೊಂದರು.

ಇತ್ತೀಚೆಗೆ ಪಂಜಾಬಿನಲ್ಲಿ ಸಿಕ್ ಉಗ್ರಗಾಮಿಗಳು ಸಿ.ಪಿ.ಐ(ಎಂ)ನ14 ಜನ ಸಕ್ರೀಯ ಕಾರ್ಯಕರ್ತರನ್ನು ಕೊಂದಿದ್ದಾರೆ. ದೀಪಕ್‌ಧವನ್, ಗುರುನಾಮ್‌ಸಿಂಗ್ ಉಪ್ಪಾಲ್, ಅಮರ್‌ಸಿಂಗ್‌ಚಂದಲಾ, ಇಂದ್ರಜಿತ್ ಕುಮಾರ್, ರಾದೇಶ್‌ಕುಮಾರ್, ಮುಂತಾದ ಡಿ.ವೈ.ಎಫ್.ಐ.ನ ಹಲವಾರು ಕಾರ್ಯಕರ್ತರನ್ನು ಉಗ್ರಗಾಮಿಗಳು ಕೊಲೆ ಮಾಡಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ತೀರ್ಮಾನ

ಡಿ.25-26 ರಂದು ಬೆಂಗಳೂರಿನಲ್ಲಿ ಪ್ರಾಂತ ರೈತ ಸಂಘದ ಸಭೆ ಸಂಘದ ಅಧ್ಯಕ್ಷರಾದ ಕಾಂ.ಎಂ.ಎಸ್.ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಕಾ.ಪಿ.ರಾಮಮೂರ್ತಿಯವರ ನಿಧನಕ್ಕೆ ಎರಡು ನಿಮಿಷ ಮೌನವನ್ನಾಚರಿಸಿ ಸಂತಾಪವನ್ನು ಸೂಚಿಸಲಾಯಿತು.

ಶ್ರೀ ಎಂ.ಜಿ.ರಾಮಚಂದ್ರನ್‌ರವರ ನಿಧನಕ್ಕೂ ಸಂತಾಪವನ್ನು ಸೂಚಿಸಲಾಯಿತು.

ಮಜ್ದೂರ್ ಕಿಸಾನ್ ಜಾಥಾ ಮತ್ತು ಅದಕ್ಕೆ ಬೆಂಬಲವಾಗಿ ನಮ್ಮ ರಾಜ್ಯದಲ್ಲಿ ನಡೆಸಿದ ನಾಲ್ಕು ಉಪ ಜಾಥಾಗಳ ಬಗ್ಗೆ ಸಭೆ ವರದಿಗಳನ್ನು ಕೇಳಿ ಅವುಗಳ ಅನುಭವಗಳನ್ನು ಗಮನಕ್ಕೆ ತೆಗೆದುಕೊಂಡಿತು. ಜಾಥಾಗಳಲ್ಲಿ ನಮ್ಮ ಪ್ರತಿನಿಧಿಗಳು ಜಾಥಾದ ಪ್ರಾಮುಖ್ಯತೆ ಹಾಗೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಹಾಗೂ ಸಾಮೂಹಿಕ ಸಂಘಟನೆಗಳ ಪಾತ್ರವನ್ನು ವಿವರವಾಗಿ ಜನತೆಯ ಮುಂದೆ ಮಂಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಡಿಸೆಂಬರ್ 9 ಕ್ಕೆ ದೆಹಲಿ ಜಾಥಾದಲ್ಲಿ ಭಾಗಿಗಳಾಗಲು ರಾಜ್ಯದಿಂದ ಸುಮಾರು ನಾಲ್ಕುವರೆ ಸಾವಿರ ಜನರು ಉತ್ಸಾಹದಿಂದ ಭಾಗವಹಿಸಲು ಹೋಗಿದ್ದು ಅವರ ಅನುಭವಗಳನ್ನು ಕೇಳಿ ಸಭೆ ತನ್ನ ಮೆಚ್ಚುಗೆಯನ್ನು ವ್ಯಕ್ತ ಪಡಿಸಿತು.

ಕೃಷಿ ಕೂಲಿಗಾರರ ಸಂಘಟನೆ

ಈ ಸಂಘಕ್ಕೆ ಸದಸ್ಯತ್ವವನ್ನು ರೈತ ಸಂಘದ ಸದಸ್ಯತ್ವದ ಕೆಲಸದ ಜೊತೆಯಲ್ಲಿ ನಿರ್ದಿಷ್ಟವಾಗಿ ಕೃಷಿ ಕಾರ್ಮಿಕರನ್ನು ಗುರ್ತಿಸಿ ಸದಸ್ಯತ್ವವನ್ನು ಕೊಡಿಸಬೇಕು. ಇದಕ್ಕೆ ರಶೀತಿ ಪುಸ್ತಕವನ್ನು ರಾಜ್ಯದ ಕೇಂದ್ರ ದಿಂದ ಪಡೆದುಕೊಳ್ಳಬೇಕು. ಸದಸ್ಯತ್ವದ ಆಧಾರದ ಮೇಲೆ 1988 ಏಪ್ರಿಲ್ ಕೊನೇ ವಾರದಲ್ಲಿ ರಾಜ್ಯ ಸಮ್ಮೇಳನ ನಡೆಸಲಾಗುವುದು. ಈ ಕಾರ್ಯಕ್ರಮ ಪ್ರತಿಯೊಂದು ಜಿಲ್ಲೆಯಲ್ಲೂ ರೈತ ಸಂಘದ ಸಹಕಾರದೊಡನೆ ನಡೆಸಬೇಕು.

ನಿರ್ಣಯಗಳು

ಸಭೆಯು ಕರ್ನಾಟಕ ರಾಜ್ಯ ರೈತ ಸಂಘವು ಪ್ರಾರಂಭದಲ್ಲಿ ರಾಜಕೀಯದಿಂದ ದೂರವೆಂದು ಹೇಳಿ ನಂತರ ಚುನಾವಣೆಯಲ್ಲಿ ಸದಸ್ಯರಿಗೆ ಭಾಗವಹಿಸಲು ಅವಕಾಶ ಮಾಡಿಕೊಟ್ಟು ಈಗ ರಾಜ್ಯ ರೈತ ಸಂಘವನ್ನು ರಾಜಕೀಯ ಪಕ್ಷವನ್ನಾಗಿ ಮಾಡಿರುವುದನ್ನು ಖಂಡಿಸಲಾಯಿತು. ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ರೈತರಿಗೆಲ್ಲಾ ಕೂಡಲೇ ದಾಖಲಾತಿಗಳನ್ನು ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಯಿತು.

ಸರ್ಕಾರವು ಇತ್ತೀಚೆಗೆ ರಚಿಸಿರುವ ಆಯೋಗದಲ್ಲಿ ರೈತ ಸಂಘಗಳ ಪ್ರತಿನಿಧಿಗಳನ್ನು ಸೇರಿಸಿ ಅವರಅಭಿಪ್ರಾಯಗಳನ್ನೊಳಗೊಂಡು ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತೀರ್ಮಾನ ಮಾಡಿ ಅವುಗಳನ್ನು ಜಾರಿಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಯಿತು.

ಭೂ ನ್ಯಾಯ ಮಂಡಳಿಯು ಗೇಣಿದಾರರಿಗೆ ಇತ್ಯರ್ಥ ಮಾಡಿಕೊಟ್ಟಿರುವ ಭೂಮಿಗೆ ಅವರಿಂದ ವಸೂಲು ಮಾಡಿರುವ ಹಣವನ್ನು ಅವರಿಗೆ ವಾಪಸ್ಸು ಕೊಡಬೇಕು ಅಲ್ಲದೆ ಭೂಮಿಯನ್ನು ಮುಫತ್ತಾಗಿ ಕೊಡಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿರೈತರು ವಾಸಕ್ಕಾಗಿ ಕಟ್ಟಿಕೊಂಡಿರುವ ಗುಡಿಸಲು ಮತ್ತು ಮನೆಗಳನ್ನು ಕ್ರಮಗೊಳಿಸಿ ಅವರಿಗೆ ಹಕ್ಕು ಪತ್ರಗಳನ್ನು ಕೊಡಬೇಕು.

ರೈತರು ಬೆಳೆದ ಬೆಳೆಗಳಿಗೆ ಹತ್ತಿ, ಕಬ್ಬು, ತಂಬಾಕು ಇತ್ಯಾದಿಗಳಿಗೆ ಬೆಂಬಲಿತ ಬೆಲೆಯನ್ನು ಘೋಷಿಸಿ ಆ ಬೆಲೆಗೆ ಕೊಂಡುಕೊಳ್ಳುವ ವ್ಯವಸ್ಥೆ ಮಾಡಬೇಕು. ಅಲ್ಲದೆ ಇಂದು ಅಡಿಕೆ ಬೆಲೆ ಕುಸಿಯುತ್ತಿರುವುದನ್ನು ತಡೆಗಟ್ಟಲು ಈ ವಸ್ತುವಿಗೆ ಒಂದುಮಾರಾಟದ ಬೆಲೆಯನ್ನು ಗೊತ್ತುಪಡಿಸಿ ಸರ್ಕಾರವು ಅಡಿಕೆ ಮಾರುಕಟ್ಟೆಗೆ ಇಳಿದು ಹಣ ಒದಗಿಸಿಕೊಂಡುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿ ನಿರ್ಣಯಗಳನ್ನು ಕೈಗೊಳ್ಳಲಾಗಿದೆ ಎಂದು ಕಾರ್ಯದರ್ಶಿ ಕಾ.ಪಿ.ಜಗನ್ನಾಥ ಅವರು ಪ್ರತಿಕಾ ಹೇಳಿಕೆ ನೀಡಿದ್ದಾರೆ.

ಸದಸ್ಯತ್ವವನ್ನು 1987-88 ಕ್ಕೆ ದ್ವಿಗುಣಗೊಳಿಸಬೇಕೆಂದು ಚರ್ಚಿಸಿ ಜಿಲ್ಲಾವಾರು ಕೋಟಾವನ್ನು ನಿರ್ಧರಿಸಲಾಗಿದೆ.

ದ. ಕ.	40,000	ಮೈಸೂರು	2,000
ಕೋಲಾರ	40,000	ಬಳ್ಳಾರಿ	5,000
ಬಿಜಾಪುರ	15,000	ಧಾರವಾಡ	3,000
ಗುಲ್ಬರ್ಗಾ	15,000	ಬೆಳಗಾಂ	2,000
ರಾಯಚೂರು	15,000	ಮಂಡ್ಯ	1,000
ಕೊಡಗು	500	ಚಿತ್ರದುರ್ಗ	500
ಉ. ಕನ್ನಡ	500	ಶಿವಮೊಗ್ಗ	500
ಚಿಕ್ಕ ಮಗಳೂರು	500	ಹಾಸನ	500
ಬೀದರ್	500	ತುಮಕೂರು	3,000
ಬೆಂಗಳೂರು	10,000		

ಸದಸ್ಯರೆಲ್ಲರೂ ಈ ಕೋಟಾಗಳನ್ನು ಮೀರಿಸಿ ಸದಸ್ಯರನ್ನು ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆ. 1988 ಜನವರಿ 15 ರಿಂದ ಫೆಬ್ರುವರಿ 15 ರ ಒಳಗೆ ಈ ಸದಸ್ಯತ್ವ ಕೊಡಿಸುವುದನ್ನು ಮುಗಿಸಬೇಕು.

ತಿದ್ದುಪಡಿ

ತಾ 20-12-87 ಐಕ್ಯರಂಗದಲ್ಲಿ ಸಣ್ಣ ಕಾಫಿ ಬೆಳೆಗಾರರ ಯಶಸ್ವಿ ಹೋರಾಟದ ಕುರಿತು ವರದಿ ಪ್ರಕಟವಾಗಿತ್ತು. ಅದರಲ್ಲಿ ಈ ಅಂಶಗಳನ್ನು ಸೇರಿಸಿ ಕೊಳ್ಳ ಬೇಕಾಗಿ ವಿನಂತಿ.

ಕೇರಳ, ತಮಿಳುನಾಡುಗಳಿಂದ ಒಂದು ಸಾವಿರಕ್ಕೂ ಮೇಲ್ಪಟ್ಟ ಸಣ್ಣ ಕಾಫಿ ಬೆಳೆಗಾರರು ಬೆಂಗಳೂರಿನಲ್ಲಿರುವ ಕಾಫಿ ಬೋರ್ಡಿನೆದುರು ಮತಪ್ರದರ್ಶನ ಧರಣಿ ನಡೆಸಿದ ಪರಿಣಾಮವಾಗಿ ಕೆಲವು ಬೇಡಿಕೆಗಳ ಕುರಿತು ಆಶ್ವಾಸನೆಪಡೆಯಲು ಸಾಧ್ಯವಾಯಿತು. ಧರಣಿಗೆ ಪೂರ್ವದಲ್ಲಿ ಬೃಹತ್ ಮೆರವಣಿಗೆ ನಡೆಯಿತು. ಸಿ. ಐ. ಟಿ. ಯು. ಮುಖಂಡರಾದ ಎನ್.ಕೆ.ಉಪಾಧ್ಯಾಯರು ಧರಣಿಯನ್ನು ಉದ್ಘಾಟನೆ ಮಾಡಿ, ರಾಜ್ಯ ಸಿ.ಐ.ಟಿ.ಯು. ಪರವಾಗಿ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿದರು. ಕೇರಳ ರಾಜ್ಯ ರೈತ ಸಂಘಟನೆಯ ಅಧ್ಯಕ್ಷರಾದನಾರಾಯಣನ್ ನಂಬಿಯಾರ, ಸಣ್ಣ ಕಾಫಿ ಬೆಳೆಗಾರರಸಂಘದ ಅಧ್ಯಕ್ಷ ಮಾಧವನ್ ಕಾರ್ಯದರ್ಶಿ ರಾಧಾಕೃಷ್ಣನ್, ಜಾಥಾದಕ್ಯಾಪ್ಟನ್‌ವರ್ಗಿಸ್‌ವೈದ್ಯನ್, ಕೊಡಗಿನ ಪೂಣಚ್ಚ ಮೊದಲಾದವರು ಧರಣಿಯ ಉದ್ದೇಶ ವಿವರಿಸಿದರು. ಧರಣಿಯ ಪರಿಣಾಮವಾಗಿ ಕಾಫಿ ಬೋರ್ಡಿನ ಅಧಿಕಾರಿಗಳ ಜೊತೆಯಲ್ಲಿ ಎರಡು ಗಂಟೆ ಕಾಲ ಸುದೀರ್ಘ ಚರ್ಚೆ ಸೌಹಾರ್ದಯುತವಾಗಿ ನಡೆಯಿತು. ರಾಧಾಕೃಷ್ಣನ್, ಪಿ.ರಾಮಚಂದ್ರರಾವ್ ಮೊದಲಾದವರು ಚರ್ಚೆಯ ಮುಖ್ಯಾಂಶಗಳನ್ನು ವಿವರಿಸಿದರು.

ಸಂಪಾದಕ ಮಂಡಳಿ.

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಗೆ ಸೋಲು

ಪಶ್ಚಿಮ ಬಂಗಾಳದ ವಿಧಾನ ಸಭೆಗೆ ಶ್ಯಾಂಪುಕೂರ ಮತದಾನಕ್ಷೇತ್ರದಿಂದ ತಾ॥27-12-87 ರಂದು ನಡೆದ ಉಪ ಚುನಾವಣೆಯಲ್ಲಿ ಸಿ. ಪಿ. ಐ. [ಎಂ] ಪಕ್ಷದ ನೇತೃತ್ವದಲ್ಲಿರುವ ಎಡರಂಗದ ಉಮೇದುವಾರ ಪುರೋಗಾಮಿ ಪಕ್ಷದ ಅಭ್ಯರ್ಥಿ ನಳಿನಿ ಗುಹ ಅವರು ಕಾಂಗ್ರೆ ಪ್ರತಿಸ್ಪರ್ಧಿಯನ್ನು 6667 ಅಧಿಕ ಮತಗಳಿಂದ ಪರಾಭವಗೊಳಿಸಿದ್ದಾರೆ.

1987 ಮಾರ್ಚ್ ತಿಂಗಳಲ್ಲಿ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಕಾಂಗ್ರೆ ಉಮೇದ್ವಾರರಾದ ಕಿರಣ ಚೌಧರಿಯವರು ಪುರೋಗಾಮಿ ಪಕ್ಷದ ಉಮೇದುವಾರರನ್ನು 1645 ಮತಗಳಿಂದ ಸೋಲಿಸಿದ್ದರು. 1971, 1982, 1987 ನ್ನು ಬಿಟ್ಟರೆ 1952 ರಿಂದಲೂ ಈ ಕ್ಷೇತ್ರದಲ್ಲಿ ಕಾಂಗ್ರೆಸ್ಸೇತರ ಉಮೇದುವಾರರೇ ಆರಿಸಿ ಬರುತ್ತಿದ್ದರು.

ಸಿ. ಪಿ. ಐ. [ಎಂ] ಹಾಗೂ ಎಡರಂಗ ಸರಕಾರದ ವಿರುದ್ಧ ರಾಜೀವ ಗಾಂಧಿಯವರೂ ರಾಜ್ಯ ಮುಖಂಡರೂ ಬೇಜವಾಬ್ದಾರಿಯುತವಾದ ಆರೋಪಗಳನ್ನು ಹೊರಿಸಿ ಅಪಪ್ರಚಾರ ಮಾಡುತ್ತಿರುವ ಹಿನ್ನೆಲೆಯಲ್ಲಿ ಈ ಚುನಾವಣೆಯಲ್ಲಿ ಕಾಂಗ್ರೆ ಸೋಲು ಎಡರಂಗಕ್ಕೆ ಆದರಲ್ಲೂ ಪ್ರಧಾನವಾಗಿ ಸಿ. ಪಿ. ಐ. ಎಂ] ಪಕ್ಷಕ್ಕೆ ಹೆಚ್ಚು ಮಹತ್ವ ಸಿಕ್ಕಿದಂತಾಗಿದೆ. ಕಾಂಗ್ರೆ ಜನಪ್ರಿಯತೆ ಕಳಕೊಳ್ಳುತ್ತಿರುವುದಕ್ಕೆ ಇದು ದಿಕ್ಸೂಚಿಯಾಗಿದೆ.

[7ನೇ' ಪುಟದಿಂದ]

ದಾಯ' ಅವಕಾಶ ನಿರಾಕರಿಸಿದೆ.

ಕನ್ ಐಕ್ಯತಾ ಸಂಘಟನೆ ಈಮೊದಲೇ ಮೊರಾಕ್ಕೋ ಪ್ರತಿಗಾಮಿಗಳಿಗೆ ತನ್ನ ಬಾಗಿಲು ಮುಚ್ಚಿತ್ತು.

1975ರಲ್ಲಿ ಸ್ಪೇನ್ ಪಶ್ಚಿಮ ಸಹಾರಾದ ತನ್ನ ವಸಾಹತುವನ್ನು ಬಿಟ್ಟು ಹೋಗಲು ನಿರ್ಧರಿಸಿದಾಗ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಕುಪ್ರಸಿದ್ಧ ಮ್ಯಾಡ್ರಿಡ್ ಒಪ್ಪಂದದ ಮೂಲಕ ಪಶ್ಚಿಮ ಸಹಾರಾದ ಮೇಲೆ ಆಕ್ರಮಣ ಮಾಡಿ ಅದನ್ನು ವಶಪಡಿಕೊಳ್ಳುವಂತೆ ಮೊರಾಕ್ಕೋ ರಾಜ ಪ್ರಭುತ್ವಕ್ಕೆ ಕುಮ್ಮಕ್ಕು ನೀಡಿದರು. ಪ್ರಜಾಪ್ರಭುತ್ವವಾದೀ ಗಣ ರಾಜ್ಯದ ಸ್ಥಾಪನೆಗಾಗಿ ಹೋರಾಡುತ್ತಿದ್ದ ಪಾಲಿಸಾರಿಯೋ ರಂಗವನ್ನು ಕೆಲವೇ ಸಮಯದೊಳಗೆ ನಿರ್ಮೂಲ ಮಾಡಬಹುದೆಂಬ ಸಾಮ್ರಾಜ್ಯಶಾಹಿಗಳು ಹಾಗೂ ಮೊರಾಕ್ಕೊ ಪ್ರತಿಗಾಮಿಗಳ ನಿರೀಕ್ಷೆ ಸುಳ್ಳಾದರೂ ಕಳೆದ ವರ್ಷದವರೆಗೂ ಮೊರಾಕ್ಕೊ ರಾಜ್ಯ ಪ್ರಭುತ್ವ ಸಹಾರಾದ ವಿಮೋಚನಾ ಪಡೆಗಳ ಬೇಡಿಕೆಗಳನ್ನು ಒಪ್ಪಬೇಕೆಂಬ ವಿಶ್ವಸಂಸ್ಥೆಯ ನಿರ್ಣಯವನ್ನು ಕೂಡಾ ನಿರ್ಲಕ್ಷಿಸುತ್ತಾ ಬಂದಿತ್ತು.

ಆದರೆ ಈಗ ಮೊತ್ತ ಮೊದಲ ಬಾರಿಗೆ ಸಹಾರಾವಿ ಜನತೆ ತನ್ನ ಪ್ರಜೆಗಳಾಗಿ ಇರಲು ಇಷ್ಟ ಪಡುವುದಿಲ್ಲವಾದರೆ ಸಹಾರಾವೀ ಗಣರಾಜ್ಯದಲ್ಲಿತಾನೇ ಮೊದಲ ರಾಯಭಾರಿ ಕಚೇರಿ ಸ್ಥಾಪಿಸಲು ಮುಂದಾಗುತ್ತೇನೆ ಎಂದು ಘೋಷಿಸಿರುವುದು ಅತ್ಯಂತ ಗಮನಾರ್ಹ ಬೆಳವಣಿಗೆ. ಪಾಲಿಸಾರಿಯೋ ರಂಗ ಕೂಡಾ ಈಗ ಇದಕ್ಕೆ ತಕ್ಕ ಪ್ರತಿಕ್ರಿಯೆ ತೋರಿ ನವಂಬರ್ 19 ರಿಂದ ಡಿಸೆಂಬರ್ 15ರ ವರೆಗೆ ಏಕಪಕ್ಷೀಯವಾಗಿ ಯುದ್ಧ ವಿರಾಮ ಪಾಲಿಸಿದೆ. ಮುಂದಿನ ಬೆಳವಣಿಗೆಗಳನ್ನು ಕಾದು ನೋಡಬೇಕು.

ಕಾಂಗ್ರೈ-ಟಿ. ಎನ್. ವಿ. ಚುನಾವಣಾ ಪೂರ್ವ ಹಿಂಸಾಚಾರ

ರಾಜ್ಯ ಎಡರಂಗ ಸರ್ಕಾರದ ಕೋರಿಕೆಯ ಪ್ರಕಾರ ಡಿಸೆಂಬರ್ 27ಕ್ಕೆ ನಡೆಯಬೇಕಾಗಿದ್ದ ಚುನಾವಣೆಯನ್ನು ಕಾಂಗ್ರೈ ಕೇಂದ್ರ ಸರ್ಕಾರ ಮುಂದೂಡಿದ್ದು, ಹೆಚ್ಚು ಸಿಕ್ಕಿರುವ ಈ ಅವಧಿಯನ್ನು ಎಡರಂಗವನ್ನು ದುರ್ಬಲಗೊಳಿಸಲು ಕಾಂಗ್ರೆಸ್‌ಗೆ ಓಟುಗಿಟ್ಟಿಸಲು ಬೇಕಾದ ಎಲ್ಲಾ ಪ್ರಜಾಪ್ರಭುತ್ವ-ವಿರೋಧಿ ತಂತ್ರಗಳನ್ನು ಹೂಡಲು ಉಪಯೋಗಿಸುತ್ತಿದೆ. ಇದು ನವಂಬರ್ 28 ರ ಪ್ರಧಾನ ಮಂತ್ರಿಗಳ ಭೇಟಿಯಿಂದ ಆರಂಭವಾಯಿತು. ಕೊಳೆತು ನಾರುತ್ತಿರುವ ಕಾಂಗ್ರೆಸ್ (ಐ) ರಾಜ್ಯ ಸಂಘಟನೆಯನ್ನು ಚುನಾವಣೆಗಾಗಿಯಾದರೂ ಪುನರ್‌ಶ್ಚೇತನಗೊಳಿಸಲು ಪ್ರಯತ್ನಿಸುವುದು ಪ್ರಧಾನಿ ಭೇಟಿ ಉದ್ದೇಶವಾಗಿತ್ತು. ಪ್ರಧಾನಿ ಜತೆ ರಾಜ್ಯ ಕಾಂಗ್ರೈ ನಾಯಕರಲ್ಲದೆ ಈಶಾನ್ಯ ಭಾರತದ ಪ್ರತ್ಯೇಕತಾವಾದಿ ಸಂಘಟನೆಗಳ ಜತೆ ಸಂಬಂಧವಿಟ್ಟುಕೊಂಡಿರುವ ಇಬ್ಬರು ವ್ಯಕ್ತಿಗಳು ಇದ್ದರು. ಅಲ್ಲದೆ ಎಡರಂಗದ ಕಟುವಿರೋಧಿ, ಕಲ್ಕತ್ತಾದ ಅಮೇರಿಕನ್ ಕನ್ಸುಲೇಟ್ ಜತೆ ಸತತ ಸಂಬಂಧವಿಟ್ಟುಕೊಂಡಿರುವ ಪತ್ರಿಕಾ ಸಂಪಾದಕನೂ ವಿಮಾನ ನಿಲ್ದಾಣದಲ್ಲಿ ಈ ಗ್ಯಾಂಗನ್ನು ಸೇರಿಕೊಂಡ. ತ್ರಿಪುರಾದ ಹಲವು ಕಡೆ ರಾಜೀವ್ ಬಾಡಿಗೆ ಪ್ರೇಕ್ಷಕರನ್ನು ಉದ್ದೇಶಿಸಿ ಮಾತನಾಡಿ ಎಡರಂಗ ಸರ್ಕಾರದ ಮೇಲೆ ಸಲ್ಲದ ಆಪಾದನೆಗಳನ್ನು ಮಾಡಿ ವಿಷಕಾರಿದರು. ಟಿ. ಎನ್. ವಿ. ಹಿಂಸಾಚಾರವನ್ನು ತಡೆಯಲು ರಾಜ್ಯ ಸರ್ಕಾರ ಅಸಮರ್ಥವಾಗಿದೆಯೆಂದು ರಾಜ್ಯದ ಬೆಳವಣಿಗೆ ಕಾರ್ಯಕ್ರಮದಲ್ಲೂ ಅದು ಆಸಕ್ತಿ ತೋರುತ್ತಿಲ್ಲವೆಂದೂ ಆಪಾದಿಸಿದರು. ಕಮ್ಯುನಿಸ್ಟ್ 'ಹಿಂಸಾಚಾರ' ದ ವಿರುದ್ಧ ಹೋರಾಡಬೇಕೆಂದು ಕಾಂಗ್ರೈ ಕಾರ್ಯಕರ್ತರಿಗೆ ಕರೆಯಿತ್ತರು. ಕಮ್ಯುನಿಸ್ಟರನ್ನು ಸೋಲಿಸಲು ಸಾಧ್ಯವಿದೆ ಎಂದು ತೋರಿಸಬೇಕೆಂದು ಕರೆಯಿತ್ತರು. ಯಾವುದೇ ಮುಲಾಜಿಲ್ಲದೆ ಕಾಂಗ್ರೈ-ಟಿ. ಯು. ಜೆ. ಎಸ್. ಮೈತ್ರಿ ಆದಿವಾಸಿ-ಆದಿವಾಸೇತರ ಐಕ್ಯತೆಯ ಸಂಕೇತ ಎಂಬ ಹಾಸ್ಯಾಸ್ಪದ ಹೇಳಿಕೆಯನ್ನು ನೀಡಿದರು. ಹಲವಾರು "ಆಶ್ವಾಸನೆ" ಗಳನ್ನು ನೀಡಿದರು. ಆದರೆ ತ್ರಿಪುರಾದ ಜನತೆ ಈ ಕೂಗಾಟಕ್ಕೆ ಸೊಪ್ಪು ಹಾಕಿಲ್ಲ. ವಿಮಾನ ನಿಲ್ದಾಣದಲ್ಲಿ ನಡೆದ ಜಂಟಿ ಸಭೆಯಲ್ಲಿ ಮುಖ್ಯ ಮಂತ್ರಿಗಳು ಈ ಆಪಾದನೆಗಳಿಗೆ ಮಾರುತ್ತರಕೊಟ್ಟರು. ಟಿ.ಎನ್.ವಿ. ಹಿಂಸಾಚಾರ ತಡೆಯಲು ಸಿ.ಆರ್.ಪಿ.ಎಫ್.- ಬಿ.ಎಸ್.ಎಫ್. ಕಾರ್ಯಾಚರಣೆ ನಡೆಸಲು ತಮ್ಮ ಪೂರ್ಣ ಸಾಮರ್ಥ್ಯ ಬಳಸುತ್ತಿಲ್ಲ. ರಾಜ್ಯ ಸರ್ಕಾರ ಕೇಳಿದ್ದ ಏಳನೇಯ ಯೋಜನೆಯ ಪಾಲಿನ ವೆಚ್ಚದ ಶೇ63 ಮಾತ್ರ ನೀಡಿದ್ದು, ಈ ಮಿತಿಯ ಒಳಗೆ ರಾಜ್ಯ ಸರ್ಕಾರ ಸಾಧ್ಯವಾದದ್ದೆಲ್ಲಾ ಮಾಡಿದೆ ಎಂದರು. ಕಾಂಗ್ರೈ-ಟಿ. ಎನ್. ವಿ.- ಆಮ್ರಾ ಬಾಂಗ್ಲಾ ಹಿಂಸಾಚಾರವೇ ರಾಜ್ಯದ ಕಾನೂನು ವ್ಯವಸ್ಥೆಯ ಸಮಸ್ಯೆ. ಕಮ್ಯುನಿಸ್ಟರು ಈ ಹಿಂಸಾಚಾರಕ್ಕೆ ಬಲಿಪಶುಗಳು, ಕಾರಣರಲ್ಲ ಎಂದರು.

ರಾಜೀವ್‌ರ ಈ ಕರೆ ಪೂರ್ಣ ಹುಸಿಯಾಗಿಲ್ಲ. ರಾಜ್ಯದಲ್ಲಿ ಕಾಂಗ್ರೈ-ಟಿ. ಎನ್.ವಿ.- ಟಿ. ಯು. ಜೆ. ಎಸ್. ನಡೆಸುತ್ತಿರುವ ಹಿಂಸಾಚಾರಗಳು ಹೆಚ್ಚುತ್ತಿವೆ. ಚಾರಿಲಾಂನಲ್ಲಿ ಮುಖ್ಯಮಂತ್ರಿಯವರ ಸಭೆಯನ್ನು ಭಂಗ ಮಾಡಲು ಪ್ರಯತ್ನಿಸಲಾಯಿತು. ಭಾನುಲಾಲ ಸಾಹಾ (ಸಿ. ಪಿ. ಐ. (ಎಂ) ವಿಧಾನಸಭಾ ಸದಸ್ಯ)ರ ಮೇಲೆ ಅವರ ಮನೆಯಲ್ಲಿಯೇ ಹಲ್ಲೆ ಮಾಡಿ ಕೊಲೆ ಮಾಡುವ ವಿಫಲ ಯತ್ನ ನಡೆಯಿತು. ಬಾಗ್ಮಾಕ್ಷೇತ್ರದ ದಿವಾನ್ ಚೆರ್ರಾದಲ್ಲಿ 15 ಟಿ. ಯು. ಜೆ. ಎಸ್. ಗೂಂಡಾಗಳು ಸಿ. ಪಿ.ಐ.(ಎಂ)ಬೆಂಬಲಿಗರಾದ ಎರಡು ಮಹಿಳೆಯರು ಮತ್ತು ಒಬ್ಬ ಯುವಕನನ್ನು ಅಮಾನುಷ ರೀತಿಯಲ್ಲಿ ಹಾಡು ಹಗಲಲ್ಲೇ ಕೊಲೆ ಮಾಡಿದರು. ದಕ್ಷಿಣ ತ್ರಿಪುರಾ ಜಿಲ್ಲೆಯಲ್ಲಿ ಟಿ. ಎನ್. ವಿ. ಕಾರ್ಯಕರ್ತರು 5 ಮಕ್ಕಳು ಮತ್ತು ಓರ್ವ ಮಹಿಳೆಯ ಕೊಲೆ ಮಾಡಿದರು. (ಡಿಸೆಂಬರ್ 18). ಇದಕ್ಕೆ 'ಪ್ರತಿಘಟನಾ" ತ್ಮಕವಾಗಿ ಕಾಂಗ್ರೈ ಮರುದಿನ ಸಂಘಟಿಸಿದ 24 ಗಂಟೆ ಬಂದ್‌ನಲ್ಲಿ ಸಿ. ಪಿ. ಎಂ. ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಯಿತು. ಸಿ.ಪಿ ಐ. (ಎಂ.) ಕಾರ್ಯಕರ್ತರು ಕಾಂಗ್ರೈ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದರು ಎಂದು ಗುಲ್ಲೆಬ್ಬಿಸಿ 12 ಗಂಟೆ ಬಂದ್‌ನ್ನು ಮುಂದುವರಿಸಲಾಯಿತು. ಇದನ್ನು ಸಿ.ಪಿ.ಐ.(ಎಂ.)ವಿರೋಧಿಸಿತು.

ಈ ಮಧ್ಯೆ ರಾಜ್ಯದಲ್ಲಿ ಎಡರಂಗದ ಪ್ರತಿಭಟನೆಯನ್ನು ಅಲಕ್ಷಿಸಿ, ಕಾಂಗ್ರೈ 'ಸಾಲ ಮೇಳ' ಸಂಘಟಿಸಲು ಮುಂದಾಗಿದೆ. ಹಿಂದಿನ ಸಾಲ ಮೇಳದಲ್ಲಾಗಿದ್ದ ಹಿಂಸಾಚಾರವನ್ನೂ ನಿರ್ಲಕ್ಷಿಸಲಾಗಿದೆ. 'ಸಾಲ ಮೇಳ' ವನ್ನು ಚುನಾವಣೆಯ ನಂತರ ನಡೆಸಬೇಕೆಂದು ಎಡರಂಗದ ಒತ್ತಾಯವನ್ನೂ ತಳ್ಳಿಹಾಕಲಾಗಿದೆ. ಇದನ್ನು ಮುಖ್ಯಮಂತ್ರಿಗಳು 'ಮುಕ್ತ ಭ್ರಷ್ಟಾಚಾರ' ಮತ್ತು 'ಅನೀತಿಯುತ' ಎಂದಿದ್ದಾರೆ.

ಇವೆಲ್ಲಾ ತಯಾರಿಗಳ ನಂತರ ಚುನಾವಣಾ ಆಯೋಗ ತ್ರಿಪುರಾ ಚುನಾವಣೆಗಳಿಗೆ ಫೆಬ್ರುವರಿ 2 ತಾರೀಕು ಗೊತ್ತುಪಡಿಸಿ ಪ್ರಕಟಣೆ ಹೊರಡಿಸಿದೆ. ಇದು ಏನಕೇನ ಪ್ರಕಾರೇಣ ತ್ರಿಪುರಾ ಚುನಾವಣೆ ಗೆಲ್ಲಲು ಕಾಂಗ್ರೈ ಕಾರಸ್ಥಾನ ಎಂದು ಸ್ಪಷ್ಟವಾಗಿದೆ.

ಫೆ-10 ರಂದು 60ಲಕ್ಷ ರಾಜ್ಯ ಸರ್ಕಾರಿ ನೌಕರರ ಮುಷ್ಕರ

60 ಲಕ್ಷ ರಾಜ್ಯ ಸರ್ಕಾರಿ ನೌಕರರು ಕೇಂದ್ರ ಸರಕಾರ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಅನುದಾನ ಕೊಡಬೇಕೆಂಬ ವಿಶೇಷ ಬೇಡಿಕೆಯ ಮೇಲೆ ಒಂದು ದಿನದ ಅಖಿಲ ಭಾರತ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ. ಈ ನಿರ್ಧಾರವನ್ನು ರಾಜ್ಯ ಸರ್ಕಾರಿ ನೌಕರರ ಫೆಡರೇಷನ್‌ನ ರಾಷ್ಟ್ರೀಯ ಮಂಡಳಿ ಕೈಗೊಂಡಿದೆ. ಫೆಡರೇಷನ್ ಈಗಾಗಲೇ ಒಂಬತ್ತನೆಯ ಆರ್ಥಿಕ ಕಮಿಶನ್ ಮುಂದೆ ಇದೇ ಬೇಡಿಕೆಯನ್ನು ಮಂಡಿಸಿದೆ. ಹಲವು ವರ್ಷಗಳಿಂದ ಫೆಡರೇಷನ್ ಈ ಬೇಡಿಕೆಯನ್ನು ಮುಂದೊಡ್ಡುತ್ತಿದ್ದು. ಈ ಬಾರಿಯ ನಿರ್ಧಾರದ ಮೂಲಕ ಒಂದು ಹೆಜ್ಜೆ ಮುಂದಿಟ್ಟಂತಾಗಿದೆ. ನಾಲ್ಕನೇ ಕೇಂದ್ರ ನೌಕರರ ವೇತನ ಆಯೋಗದ ವರದಿ ಜಾರಿಯ ನಂತರ, ಕೇಂದ್ರ ನೌಕರರ ಜತೆ ಸಮಾನತೆ ರಾಜ್ಯ ನೌಕರರ ಮುಖ್ಯ ಬೇಡಿಕೆಯಾಗಿದ್ದು ಇದನ್ನು ಜಾರಿಗೊಳಿಸಲು ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಆರ್ಥಿಕ ನೆರವು ನೇರವಾಗಿ ಸಂಬಂಧಿಸಿದೆ. ತತ್‌ಕ್ಷಣದ ಬೇಡಿಕೆಗಳಿಂದ, ಇವುಗಳನ್ನು ಪೂರೈಸಲು ಸಹಾಯವಾಗುವ ಆರ್ಥಿಕ ನೀತಿಗಳಿಗಾಗಿ ಹೋರಾಡುವ ಉನ್ನತ ಮಟ್ಟದ ಟ್ರೇಡ್ ಯೂನಿಯನ್ ಪ್ರಜ್ಞೆಯನ್ನು ಈ ಮೂಲಕ ಫೆಡರೇಷನ್ ಮುಟ್ಟಿದೆಎಂದು ಹೇಳಬಹುದು.

ಈ ಮುಖ್ಯ ಬೇಡಿಕೆಯಲ್ಲದೆ ಒಂದು ದಿನದ ಮುಷ್ಕರ ಕಲಮು 311 ಎ.ಬಿ ಸಿ.ಗಳ ಅನ್ವಯ ನೌಕರರ ಬರಖಾಸ್ತು ತಡೆಯಲು ಈ ವಿಧಿಗಳನ್ನು ಸಂವಿಧಾನದಿಂದ ಕಿತ್ತು ಹಾಕುವುದು, ಹಲವು ರಾತಿಯಲ್ಲಿ ಕಿತ್ತು ಹಾಕಲ್ಪಟ್ಟಿರುವ ರಾಜ್ಯ ನೌಕರರುಗಳನ್ನು ವಾಪಸು ತೆಗೆದುಕೊಳ್ಳುವುದು ಮತ್ತು ಪ್ರಜಾಪ್ರಭುತ್ವ-ವಿರೋಧಿ ಕಾನೂನುಗಳನ್ನು ವಾಪಸು ತೆಗೆದುಕೊಳ್ಳುವುದರ ಬೇಡಿಕೆಗಳನ್ನೂ ಮುಂದಿಟ್ಟಿದ.

ಸೋವಿಯತ್ ಒಕ್ಕೂಟಕ್ಕೆ 65 ತುಂಬಿತು

ಸೋವಿಯೆತ್ ಒಕ್ಕೂಟದ ಸ್ಥಾಪನೆಯಘೋಷಣೆ ಸರಿಯಾಗಿ 65 ವರ್ಷಗಳ ಹಿಂದೆ ಡಿಸೆಂಬರ್ 30, 1922 ಮಾಸ್ಕೋದ ವಿಶ್ವವಿಖ್ಯಾತ ಬೋಲ್ಶೋಯ್ ರಂಗ ಮಂದಿರದಲ್ಲಿ ನಡೆಯಿತು. ಅದು ಸೋವಿಯತ್ ಜನತೆಯ ಮುನ್ನಡೆಯ ಒಂದು ಪ್ರಮುಖ ಘಟ್ಟ. ಈಗ ಸೋವಿಯತ್ ಒಕ್ಕೂಟದಲ್ಲಿ 53 ದೇಶೀಯ ಪ್ರಭುತ್ವಗಳಿವೆ-15 ಗಣರಾಜ್ಯಗಳು, 20 ಸ್ವಾಯತ್ತ ಗಣರಾಜ್ಯಗಳು, 8 ಸ್ವಾಯತ್ತ ಪ್ರದೇಶಗಳು ಹಾಗೂ 10 ಸ್ವಾಯತ್ತ ಕ್ಷೇತ್ರಗಳು 1920 ರ ದಶಕದಲ್ಲಿ ಅಲ್ಲಿ ಸುಮಾರು 200 ದೇಶೀಯ ಗುಂಪುಗಳಿದ್ದವು. ಅವೀಗ ಪರಸ್ಪರ ಕ್ರೋಢೀಕರಣಗೊಂಡು ಸುಮಾರು ಅರ್ಧಕ್ಕಿಳಿದಿವೆ.

ಸೋವಿಯತ್ ಒಕ್ಕೂಟದಲ್ಲಿ ಮಿಶ್ರ ಮದುವೆಗಳು ಹೆಚ್ಚುತ್ತಿರುವುದು 65 ವರ್ಷಗಳ ಸಾಧನೆಗಳಲ್ಲೊಂದು. ಈಗ ಪ್ರತಿ 7ರಲ್ಲಿ ಒಂದು ಮದುವೆ ಅಂತರ್-ದೇಶೀಯವಾಗಿದೆ ಪಟ್ಟಣಗಳಲ್ಲಿ ಈ ಸಂಖ್ಯೆ ಪ್ರತಿ ನಾಲ್ಕರಲ್ಲಿ ಒಂದು. ಇಂತಹ ಮದುವೆಗಳಲ್ಲಿ ವಿಚ್ಛೇದನ ದರವೂ ಕಡಿಮೆಯೆಂದು ಕಂಡು ಬಂದಿದೆಯಂತೆ. ಅಂತರ್-ದೇಶೀಯ ಮದುವೆಯಿಂದ ಜನ್ಮ ಪಡೆದ ಮಕ್ಕಳಿಗೆ ತಮಗೆ ಸೂಕ್ತವೆನಿಸಿದ ದೇಶೀಯತೆಯನ್ನು ಆರಿಸುವ ಹಕ್ಕು ನೀಡಲಾಗಿದೆ.

ಜಪಾನೀ ಕಮ್ಯುನಿಸ್ಟ್ ಪಕ್ಷದ 18ನೇ ಮಹಾಧಿವೇಶನ

ನವಂಬರ್ 25 ರಿಂದ 29ರ ವರೆಗೆ ಅತಾಮೀ ನಗರದಲ್ಲಿ ಜರುಗಿದ ಜಪಾನೀ ಕಮ್ಯುನಿಸ್ಟ್ ಪಕ್ಷದ 18 ನೇ ಮಹಾಧಿವೇಶನ ದ್ವಿತೀಯ ಮಹಾಯುದ್ಧ ನಂತರದ ಜಪಾನಿನ ಅತೀ ದೀರ್ಘಕಾಲದ ಪ್ರಧಾನಿ ನಕಾಸೋನೆಯಿಂದ ಹೊಸ ಪ್ರಧಾನಿ ತಾಕೇಶಿಟಾ ಅಧಿಕಾರ ವಹಿಸಿಕೊಂಡ ಹಾಗೂ ವಿಶ್ವಾದ್ಯಂತ ಶೇರು ಮಾರ್ಕೆಟ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಜರುಗಿತು.

ಈ ಮಹಾಧಿವೇಶನ ಜಪಾನಿನಲ್ಲಿ ಅಮೇರಿಕನ್ ಮಿಲಿಟರಿ ನೆಲೆಗಳನ್ನು ಮುಂದುವರೆಸಿ ಜಪಾನನ್ನು ಅಮೆರಿಕನ್ ಜಾಗತಿಕತಂತ್ರದ ಅಡಿಯಾಳಾಗಿ ಮಾಡುವ ಜಪಾನ್-ಅಮೆರಿಕಾ ಮಿಲಿಟರಿ ಒಪ್ಪಂದಕ್ಕೆ ತನ್ನ ತೀವ್ರ ವಿರೋಧವನ್ನು ವ್ಯಕ್ತಪಡಿಸಿತು. ಅಣುಬಾಂಬನ್ನು ಸ್ವತಃ ಅನುಭವಿಸಿದ ಏಕಮಾತ್ರ ದೇಶ ಜಪಾನಿನ ಜನತೆಯನ್ನು ವಿಶ್ವವ್ಯಾಪೀ ಪರಮಾಣು ಸಸ್ತ್ರಾಸ್ತ್ರ ವಿರೋಧಿ ಆಂದೋಲನದಲ್ಲಿ ಮತ್ತಷ್ಟು ತೀವ್ರವಾಗಿ ಒಳಗೊಳ್ಳುವಂತೆ ಮಾಡಲು ಮಹಾಧಿವೇಶನಕರೆನೀಡಿತು.

ಜಪಾನಿನ ಈಗಿನ ಘಟ್ಟವನ್ನು "ದ್ವಿತೀಯ ಮಹಾಯುದ್ಧ ನಂತರದ ಪ್ರತೀಗಾಮೀ ಹಲ್ಲೆಗಳ ಎರಡನೇಯ ಹಂತ" ಎಂದು ಚಿತ್ರಿಸಿರುವ ಮಹಾಧಿವೇಶನ ಜಪಾನೀ ಕಾರ್ಮಿಕರ ಅತೀ ಕಮ್ಮಿ ವೇತನದ ಆಧಾರದ ಮೇಲೆ ಜಪಾನೀ ಗುತ್ತೇದಾರಿಗಳು ಬಹುರಾಷ್ಟ್ರೀಯ ಗುತ್ತೇದಾರಿಗಳಾಗಿದ್ದಾರೆ, ತಮ್ಮ ದೇಶದಲ್ಲಿ ಕೆಲವು ಉತ್ಪಾದನಾ ಘಟಕಗಳನ್ನು ಮುಚ್ಚಿ ಅವನ್ನು ಇನ್ನೂ ಅಗ್ಗವಾಗಿ ಪಡೆಯಲು ಇತರ ಏಶ್ಯನ್ ದೇಶಗಳಿಗೆ ವರ್ಗಾಯಿಸಿದ್ದಾರೆ. ಇದರಿಂದ ನಿರುದ್ಯೋಗ, ರಿಟ್ರೆಂಚ್‌ಮೆಂಟ್, ಸಣ್ಣ ಉದ್ದಿಮೆದಾರರ ವ್ಯಾಪಕ ದಿವಾಳಿಗಳಿಂದಾಗಿ ಪರಿಸ್ಥಿತಿ ಹದಗೆಡುತ್ತಿದೆ ಎಂದು ಅಧಿವೇಶನದ ರಾಜಕೀಯ ವರದಿ ವಿಶ್ಲೇಷಿಸಿತು. ಅದೇ ರೀತಿ ಟ್ರೇಡ್‌ಯೂನಿಯನ್ ರಂಗದಲ್ಲಿ ಸರಕಾರಿ ಪರ ಸಂಘಟನೆಯೊಂದನ್ನು ಎತ್ತಿಕಟ್ಟುವ ಪ್ರಯತ್ನ ನಡೆಯುತ್ತಿದ್ದು ಈ ಹಿನ್ನೆಲೆಯಲ್ಲಿ ಟಿ.ಯು.ಸಿ.ಯು.ಎಫ್. ಕಾರ್ಮಿಕ ಸಂಘಟನೆಯನ್ನು ಮತ್ತಷ್ಟು ಬಲಪಡಿಸಲು ಅಧಿವೇಶನ ನಿರ್ಧರಿಸಿತು.

ಸುಮಾರು 5 ಲಕ್ಷ ಸದಸ್ಯತ್ವ ಹೊಂದಿರುವ(ಬಂಡವಾಳಶಾಹಿಜಗತ್ತಿನ ಎರಡನೇ ಅತೀ ದೊಡ್ಡ ಕಮ್ಯುನಿಸ್ಟ ಪಕ್ಷವಾದ) ಜಪಾನೀ ಕಮ್ಯುನಿಸ್ಟ ಪಕ್ಷದ ಈ ಅಧಿವೇಶನದಲ್ಲಿ 999 ಪ್ರತಿನಿಧಿಗಳುಭಾಗವಹಿಸಿದ್ದರು. ಅಧಿವೇಶನ 205 ಸದಸ್ಯರುಳ್ಳ ಕೇಂದ್ರ ಸಮಿತಿಯನ್ನು ಆರಿಸಿತು. ಇದರಲ್ಲಿ 15.6 ಶೇಕಡಾದಷ್ಟು ಮಹಿಳೆಯರು ಕೆಂಜಿ ಮಿಯಾಮಾಟೋ ಪಕ್ಷದ ಅಧ್ಯಕ್ಷರಾಗಿ ತೆತ್ಸುರೋವಾ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಕೇಂದ್ರ ಸಮಿತಿಯ ಅಧ್ಯಕ್ಷ ಮಂಡಳಿಯ ಹಿರೋಮು ಮುರಾಕಮಿಯವರನ್ನು ಮಂಡಳಿಯ ಮುಖ್ಯಸ್ಥರನ್ನಾಗಿ ಹಾಗೂ ಮಿತ್ಸುಹಿರೋ ಕನೇಕೋರವರನ್ನು ಸೆಕ್ರಟಾರಿಯೆಟ್ ಮುಖ್ಯಸ್ಥರನ್ನಾಗಿ ಆರಿಸಲಾಯಿತು.

ಸಹರಾ ವಿಮೋಚನಾ ಶಕ್ತಿಗಳ ಮುನ್ನಡೆ

ಗೋರ್ಬಚೆವ್ ಹಾಗೂ ರೇಗನ್ ನಡುವಣ ವಾಶಿಂಗ್ಟನ್ ಶೃಂಗಸಭೆಯಿಂದ ವಿಶ್ವಾದ್ಯಂತ ರಾಷ್ಟ್ರೀಯ ವಿಮೋಚನಾಹೋರಾಟಗಳಿಗೆ ಒಳ್ಳೆಯ ಪ್ರಯೋಜನವಾಗುವಂತೆ ಕಾಣುತ್ತಿದೆ. ಯುರೋಪಿನಲ್ಲಿ ಶಾಂತಿಯ ಸಾಧ್ಯತೆಯಿಂದಾಗಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ನ್ಯಾಟೋ ಮಿತ್ರರು ವಸಾಹತುಗಳ ಪ್ರಶ್ನೆಯಲ್ಲಿ ಈಗ ಸ್ವತಂತ್ರ ನಿಲುವು ತಳೆಯುವ ಧೈರ್ಯ ಮಾಡುತ್ತಿರುವಂತೆ ಕಾಣುತ್ತಿದೆ.

ಅಂಗೋಲಾದ ಮಣ್ಣಿನಿಂದ ಹಿಂದೆಗೆಯಬೇಕೆಂದು ದಕ್ಷಿಣ ಅಫ್ರಿಕಾದ ವರ್ಣದ್ವೇಷಿಗಳನ್ನು ಒತ್ತಾಯಿಸುವ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯವನ್ನು ಈ ಬಾರಿ ಅಮೇರಿಕಾ ತನ್ನ ವಿಟೋ ಅಧಿಕಾರ ಚಲಾಯಿಸಿ ವಿಫಲಗೊಳಿಸಲು ಯತ್ನಿಸಲಿಲ್ಲ. 1981 ರಲ್ಲಿ ಹಿಂದೆ ಮುಂದೆ ನೋಡದೆ ಈ ರೀತಿ ಮಾಡಿತ್ತು. ಹಾಗೇನೇ ಅಂಗೋಲಾದ ಪ್ರತಿಗಾಮಿ ಮುಖಂಡ ರೇಗನ್ ಬೆಂಬಲಿತ ಸಾವಿಂಬಿಗೆ ಲಂಡನ್, ಪ್ಯಾರಿಸ್ ಹಾಗೂ ಬಾನ್‌ನಲ್ಲಿ ಯಾವ ಸ್ವಾಗತವೂ ದೊರೆಯಲಿಲ್ಲ.

ಮೊರಾಕ್ಕೊ ಕೂಡಾ ಈಗ ಇದೇ ಸ್ಥಿತಿಗೆ ಬಂದಿರುವಂತೆ ಕಾಣುತ್ತಿದೆ. ಸಹಾರಾವಿ ಅರಬ್ ಗಣ ರಾಜ್ಯದ ವಿಮೋಚನಾ ಪಡೆಗಳ ವಿರುದ್ಧ ಅಮೆರಿಕನ್, ದಕ್ಷಿಣಆಫ್ರಿಕಾ, ಫ್ರೆಂಚ್, ಇಸ್ರೇಲೀ ಹಾಗೂ ಸೌದೀ ಬೆಂಬಲದೊಂದಿಗೆ ಆಕ್ರಮಣ ನಡೆಸುತ್ತಿರುವ ಮೊರಾಕ್ಕೊಗೆ ಪ್ರವೇಶ ನೀಡಲು 'ಯುರೋಪಿಯನ್ ಆರ್ಥಿಕ ಸಮು

(8ನೇ ಪುಟ ನೋಡಿ)

ಫೇರ್‌ಫ್ಯಾಕ್ಸ್ ತನಿಖೆ: ಹಿನ್ನಲೆಯಲ್ಲಿರುವ ಪ್ರಶ್ನೆಗಳು

(1 ನೇ ಪುಟದಿಂದ)

ನೇಮಕದಲ್ಲಿ ಅವರ ಪಾತ್ರದಪರಿಣಾಮವಾಗಿ ಅವರನ್ನು ತೆಗೆಯಬೇಕೆಂಬ ತೀರ್ಮಾನಕ್ಕೆ ಪ್ರಧಾನಮಂತ್ರಿಗಳು ಬಂದಿದ್ದರೆ ಅವರು ಹೀಗೆ ಮಾಡುತ್ತಿರಲಿಲ್ಲ.

ಅಂತಿಮ ಹೊಣೆಯಾರದು?

ವಿಚಾರಣಾ ಆಯೋಗ ಅನುಸರಿಸಿದ ಕ್ರಮ ಕೂಡಾ ಆಯೋಗದ ನಿಷ್ಪಕ್ಷಪಾತತೆಯಬಗ್ಗೆ ಸಂಶಯ ಉಂಟುಮಾಡುತ್ತದೆ ಎಂದು ವಿ.ಪಿ.ಸಿಂಗ್ ಹೇಳುತ್ತಾರೆ ಯಾವ ಕಾನೂನಿನನ್ವಯ ಆಯೋಗ ತನ್ನ ಕಲಾಪ ನಡೆಸಬೇಕೋ ಅದರ ಪ್ರಕಾರ ಆಯೋಗದ ವಿಚಾರಣೆ ತಟ್ಟಬಹುದಾದ ವ್ಯಕ್ತಿಗೆ ತನ್ನ ವರ್ತನೆಯನ್ನು ಸಮರ್ಥಿಸಿಕೊಳ್ಳಲು, ಪಾಟೀಸವಾಲು ಮಾಡಲು ಅವಕಾಶ ನೀಡಲೇಬೇಕು. ಆದರೆ ವಿ.ಪಿ.ಸಿಂಗ್‌ರಿಗೆ ಈ ಅವಕಾಶ ನೀಡಲಿಲ್ಲ.

"ಭಾರತದ ಭದ್ರತೆ ಅಪಾಯಕ್ಕೀಡಾಗುವ ಸ್ಥಿತಿಯಿದಿದ್ದರೆ ಆಯೋಗ ಪ್ರಧಾನ ಮಂತ್ರಿಗಳಿಗೇಕೆ ಪಾಟೀ ಸವಾಲು ಹಾಕಲಿಲ್ಲ? ನನಗೆ ಕಾನೂನಿನ ಪ್ರಕಾರ ಅವಕಾಶ ನೀಡಿದ್ದರೆ ಪಾಟೀ ಸವಾಲುಮಾಡಲುಸಾಧ್ಯವಾಗುತ್ತಿತ್ತು. ನನ್ನ ಮೇಲ್ವಿಚಾರಣೆಯಲ್ಲಿ ಫೇರ್ ಫ್ಯಾಕ್ಸ್ ಕೆಲವೇವಾರ ಕೆಲಸಮಾಡಿತ್ತು ಆದರೆ ನಂತರ ಪ್ರಧಾನಮಂತ್ರಿಗಳ ಮೇಲ್ವಿಚಾರಣೆಯಲ್ಲಿ ಹಲವುತಿಂಗಳು ಅದು ಕೆಲಸ ಮಾಡಿಸಿಲ್ಲ!" ಎಂಬ ಸರಿಯಾದ ಪ್ರಶ್ನೆಯನ್ನೇ ಕೇಳಿದ್ದಾರೆ ವಿ.ಪಿ.ಸಿಂಗ್. ತಾನು ಆಪ್ರಶ್ನೆಯೆತ್ತಿದ ಮೇಲಷ್ಟೇ ಪ್ರಧಾನಮಂತ್ರಿಗಳು ಫೇರ್ ಫ್ಯಾಕ್ಸ್‌ನೊಡನೆ ಮಾಡಿಕೊಂಡಿದ್ದ ವ್ಯವಸ್ಥೆಯನ್ನು ರದ್ದು ಮಾಡಿದರು ಎಂದು ವಿ.ಪಿ.ಸಿಂಗ್ ಹೇಳಿದ್ದಾರೆ.

ತುಸುವಾದರೂ ನಿಷ್ಪಕ್ಷಪಾತ ದೃಷ್ಟಿ ಅಥವಾ ದೇಶದ ಭದ್ರತೆ ಬಗ್ಗೆ ಕಾಳಜಿ ಇರುವ ಯಾವನೇ ಆದರೂ ವಿ.ಪಿ. ಸಿಂಗ್ ಹಣಕಾಸುಮಂತ್ರಿಯಾಗಿಮಾಡಿದುದಕ್ಕೆಪ್ರಧಾನಮಂತ್ರಿಗಳನ್ನುಹೊಣೆ ಮಾಡದೆ ಇರಲು ಸಾಧ್ಯವಿಲ್ಲ. ಎಲ್ಲಾ ನಿರ್ಧಾರಗಳಿಗೂ ಮಂತ್ರಿಮಂಡಲದ ಸಾಮೂಹಿಕ ಜವಾಬ್ದಾರಿಯಿದೆ. ಅಂತಿಮವಾಗಿ ತನ್ನೆಲ್ಲಾಮಂತ್ರಿಗಳನಿರ್ಣಯಗಳಿಗೂ ಮಂತ್ರಿಮಂಡಲದ ಮುಖ್ಯಸ್ಥನಾಗಿ ಪ್ರಧಾನಮಂತ್ರಿಯದೇ ಹೊಣೆ ಎಂಬ ಕಾರಣಕ್ಕಾಗಿ ಮಾತ್ರವೇ ಅಲ್ಲ, ತಾನೇ ಸ್ವತಃ ಹಣಕಾಸಿನ ಇಲಾಖೆ ವಹಿಸಿಕೊಂಡ ಮೇಲೂ ಹಲವು ವಾರಗಳ ಕಾಲ ಇದು ಮುಂದುವರಿಯಿತು ಎಂಬಸಂಗತಿಕೂಡಾಇಲ್ಲಿದೆ. ಹಾಗಿದ್ದರೆ ಈ ಆರೋಪಗಳು ಮತ್ತು ಕೇಸರಿಗಳು ಅದೇಕೆ ವಿ.ಪಿ.ಸಿಂಗ್‌ಹಣಕಾಸುಮಂತ್ರಿಯಾಗಿದ್ದ ಮಂತ್ರಿಮಂಡಲದ ಮುಖ್ಯಸ್ಥನಾಗಿ ಮತ್ತು ಹಲವುವಾರ ಸಿಂಗ್‌ರವರ ನಂತರ ಹಣಕಾಸು ಇಲಾಖೆ ವಹಿಸಿಕೊಂಡಿದ್ದ ಪ್ರಧಾನಮಂತ್ರಿಗಳನ್ನು ಅವರ ಹೊಣೆಯಿಂದ ವಿಮುಕ್ತಗೊಳಿಸಿ ಕೇವಲ ವಿ.ಪಿ.ಸಿಂಗ್‌ರ ವಿರುದ್ಧ ಮಾತ್ರವೇ ಪ್ರಚಾರ ಮಾಡಬೇಕೆನ್ನುತ್ತಿದ್ದಾರೆ?

ಪ್ರಾಮಾಣಿಕತನವಲ್ಲ

ವಿ. ಪಿ. ಸಿಂಗ್‌ರು ರಾಜೀವಗಾಂಧಿ ಮಂತ್ರಿ ಮಂಡಲದಲ್ಲಿ ಹಣಕಾಸು ಮಂತ್ರಿಯಾಗಿ ಅನುಸರಿಸಿದ ಇತರ ಎಲ್ಲಾ ಧೋರಣೆಗಳಂತೆ ಫೇರ್ ಫ್ಯಾಕ್ಸ್‌ನ್ನು ತನಿಖೆಗೆ ಗೊತ್ತು ಪಡಿಸಿದ್ದನ್ನು ಕೂಡಾ ನಿಜವಾದ ಸಾಮ್ರಾಜ್ಯಶಾಹೀ-ವಿರೋಧಿ ವ್ಯಕ್ತಿಗಳ್ಯಾರೂ ಸಮರ್ಥಿಸುವ ಹಾಗಿಲ್ಲ. ಆದರೂ ಅವರು ಹಣಕಾಸು ಮಂತ್ರಿಯಾಗಿದ್ದ ನಡೆದದ್ದಕ್ಕೆ ಪ್ರಧಾನ ಮಂತ್ರಿಗಳು ಹಾಗೂ ಅವರ ಇತರ ಸಹ ಯೋಗಿಗಳ ಅವರ ಮೇಲಷ್ಟೇ ಹೊಣೆ ಹೊಲಿಸುವುದು ಪ್ರಾಮಾಣಿಕತನವಲ್ಲ.

ಆಯೋಗ ತನಿಖೆ ನಡೆಸಿದ ವೈಖರಿ ಬಗ್ಗೆ ಬಹಳ ಸಮವಾಗಿಯೇ ಹೇಳುವುದಾದರೂ ಕೂಡಾ ಅದು ತನ್ನ ವಿಧಾನದ ಮೂಲಕತನಿಖಾಆಯೋಗಗಳನ್ನೇ ಅಪಹಾಸ್ಯಕ್ಕೀಡು ಮಾಡಿದೆ ಎಂದೇ ಹೇಳಬೇಕಾಗುತ್ತದೆ. ಅರ್ಲಿ ಇದ್ ಕೇಸರಿ ಇತ್ಯಾದಿಗಳು ಯಾರ ವಿರುದ್ಧ ಪ್ರಚಾರ ಮಾಡಬೇಕೆಂದಿರುವರೋ ಅವರಲ್ಲಷ್ಟೇ ತಪ್ಪುಹುಡುಕುವಪ್ರಯತ್ನ ಅದು ಮಾಡಿದೆಯೇನೋ ಎಂಬ ಅನುಮಾನಕ್ಕೆ ಅವಕಾಶ ನೀಡಿದೆ. ಆದ್ದರಿಂದ ಸಂಸತ್ತಿನಲ್ಲಿ ವಿರೋಧ ಪಕ್ಷಗಳು ಆಯೋಗದ ತೀವ್ರ ಟೀಕೆ ಮಾಡಿರುವುದು ಸರಿಯಾಗೇ ಇದೆ.

ಆದರೂ ಆಯೋಗ ಹೊರಗೆಡಹಿರುವ ಸಂಗಾತಿಗಳು, ಭಾರತದ ಭದ್ರತೆಯ ಬಗ್ಗೆ ಕಾಳಜಿಯಿರುವವರೆಲ್ಲರೂ ಸರ್ಕಾರದ ಕಾರ್ಯನಿರ್ವಹಣೆಯ ಬಗ್ಗೆ ಆತಂಕ ಪಡುವಂತೆ ಮಾಡಿದೆ ಎಂಬುದನ್ನೂ ಇಲ್ಲಗಳೆಯುವಂತಿಲ್ಲ. ಯಾಕೆಂದರೆ ಒಂದು ಸೂಕ್ಷ್ಮ ತನಿಖೆಯನ್ನುಸಾಮ್ರಾಜ್ಯಶಾಹೀ ಬೇಹುಗಾರ ಏಜೆಂಸಿಗಳೊಂದಿಗೆ ಸಂಬಂಧ ಹೊಂದಿರುವ ಒಂದು ಸಂಸ್ಥೆಗೆ ಕೊಡಲಾದ ಉದಾಹರಣೆ ಇಲ್ಲಿದೆ. ತನಿಖೆಯ ತಕ್ಷಣದ ಉದ್ದೇಶವೇನೆ ಇರಲಿ ಇದರ ಪರಿಣಾಮವಾಗಿ ನಮ್ಮ ರಾಜಕೀಯ ವ್ಯವಸ್ಥೆಯ ಸೂಕ್ಷ್ಮ ಕ್ಷೇತ್ರಗಳಲ್ಲಿ ಕಾಲೂರಲು ಈ ಬೇಹುಗಾರ ಸಂಘಟನೆಗಳಿಗೆ ಸಾಧ್ಯ ಮಾಡಿಕೊಟ್ಟಂತಾಗಿದೆ.

ಇದನ್ನು ಸರಕಾರ ಕಣ್ಣು ತೆರೆದು ಕೊಂಡೇ ಮಾಡಿದೆಯೇ? ಹಾಗಿದ್ದರೆ ಸರ್ಕಾರ ದೇಶದ ಭದ್ರತೆ ಹಾಗೂ ರಕ್ಷಣೆಗೆ ಅಪಾಯ ತಂದ ತಪ್ಪು ಮಾಡಿದೆ. ಸರಕಾರವಲ್ಲ ಬೇರೆ ಯಾರೋ ಮಾಡಿರುವರೆಂದು ಹೇಳುವುದಾದರೆ ಯಾರು ಆ ಬೇರೆಯವರು? ಪ್ರಧಾನ ಮಂತ್ರಿಗಳಂತೂ ಅಲ್ಲ ಎಂದು ಗುಲಾಬ್‌ನಬೀ ಆಝಾದ್, ಸೀತಾರಾಂ ಕೇಸರಿ ಮೊದಲಾದ ವಿ. ಪಿ. ಸಿಂಗರ ಮೇಲೇನೇ ಎಲ್ಲವನ್ನೂ ಹೊರಿಸುವವರ ಅಂಬೋಣ.

ಇಬ್ಬರೂ ಕುರುಡಾಗಿದ್ದಾರೆ

ವಿ. ಪಿ. ಸಿಂಗ್ ಕೂಡಾ ಹಣಕಾಸಿನ ಮಂತ್ರಿಯಾಗಿ ತಾನು ಮಾಡಿದುದ್ದನ್ನು ಸಮರ್ಥಿಸಿಕೊಳ್ಳುತ್ತಾರೆ. ಕಪ್ಪು ಹಣದ ವಿರುದ್ಧ ಸತತ ಹೋರಾಟ ನಡೆಸುವ ಉತ್ಸಾಹದಲ್ಲಿ ಸಿ. ಐ. ಎ., ಎಫ್. ಬಿ. ಐ. ಗಳ ಮುಷ್ಟಿಯಲ್ಲಿರುವ ಏಜೆಂಸಿಗಳನ್ನು ತೊಡಗಿಸಿಕೊಳ್ಳಲು ಕೂಡಾ ಅವರು ಸಿದ್ಧರಾಗಿದ್ದರು, ಈಗಲೂ ಸಿದ್ಧರಾಗಿದ್ದೇನೆನ್ನುತ್ತಾರೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳ ಜಾಗತಿಕ ಪ್ರಾಬಲ್ಯ ಪಡೆಯುವ ಯತ್ನದಲ್ಲಿ ಈ ಬೇಹುಗಾರಿಕೆ ಏಜೆಂಸಿಗಳ ಪಾತ್ರದ ಅರಿವಿದ್ದವರು ಯಾರೂ ಇದನ್ನು ಒಪ್ಪಲು ಸಾಧ್ಯವಿಲ್ಲ. ಆದ್ದರಿಂದಲೇ ಫೇರ್‌ಫ್ಯಾಕ್ಸ್‌ನ ಸಹಾಯ ಪಡೆಯುವ ಪ್ರಶ್ನೆ ಬಂದಾಗ ಸಿ.ಪಿ.ಐ. (ಎಂ) ಸಂಸತ್ತಿನಲ್ಲಿ ಹಾಗೂ ಹೊರಗಡೆ ಈ ಪ್ರಶ್ನೆಯನ್ನು ಎತ್ತಿತು. ಈಗ ವಿ. ಪಿ. ಸಿಂಗ್ ರಾಜೀವ್‌ಗಾಂಧಿಯವರ ಸಹಯೋಗಿಯಾಗಿಲ್ಲ ಎಂದ ಮಾತ್ರಕ್ಕೆ ಅವರು ಹಣಕಾಸಿನ ಮಂತ್ರಿಯಾಗಿ ಮಾಡಿದ ಕೆಲಸವನ್ನು ವಿರೋಧ ಪಕ್ಷಗಳಲ್ಲಿರುವ ಯಾವ ಸಾಮ್ರಾಜ್ಯಶಾಹೀ ವಿರೋಧಿ ವ್ಯಕ್ತಿಯೂಸಮರ್ಥಿಸಿಕೊಳ್ಳಲಾರ.

ಆಯೋಗ ಹೊರಗೆಡಹಿರುವ ಫೇರ್ ಫ್ಯಾಕ್ಸ್‌ಗೆ ತನಿಖೆಯನ್ನು ಒಪ್ಪಿಸುವ ನಿರ್ಣಯದ ಹಿಂದಿನ ಸಂಗತಿಗಳು "ಆಘಾತಕಾರಿ" ಎಂದು ಸಿ. ಪಿ. ಐ. (ಎಂ) ನ ಪಾಲಿಟ್ ಬ್ಯೂರೋ ವರ್ಣಿಸಿದೆ. 'ಕೇಂದ್ರದಆಡಳಿತದಲ್ಲಿ ಸರ್ಕಾರೀ ನೀತಿ ನಿಯಮಗಳು ಹೇಗೆ ಕುಸಿದು ಬಿದ್ದಿವೆ, ಹೇಗೆ ಅದು ದಿವಾಳಿಕೋರತನ ಪ್ರದರ್ಶಿಸುತ್ತಿದೆ ಎಂಬುದು ಈ ವರದಿಯಿಂದ ತಿಳಿದು ಬರುತ್ತದೆ. ದೊಡ್ಡ ಬಂಡವಾಳಶಾಹಿಗಳು ದೂರದಿಂದಲೇ ಹತೋಟಿಯಲ್ಲಿಟ್ಟು ಕೊಂಡಿರುವಂತಹ ವಿದೇಶೀ ಏಜೆಂಸಿಗಳಿಗೆ ಬಲಿ ಬೀಳುವಂತಹ ಅಧಿಕಾರ ಶಾಹಿಗಳವರು. ಸಮಸ್ತ ಸರ್ಕಾರೀ ವ್ಯವಸ್ಥೆಯಕಾರ್ಯನಿರ್ವಹಣೆಯಲ್ಲಿ ದೇಶದ ಐಕ್ಯತೆಗೆ ಗಂಭೀರ ಅಪಾಯವೊಡ್ಡುವ ಅಂಶವಿದೆಯೆನ್ನುವುದಕ್ಕೆ ಇದಕ್ಕಿಂತ ಹೆಚ್ಚು ಕಳಂಕಕಾರೀ ಸಾಕ್ಷಿ ಬೇರೆ ಬೇಕೇ' ಎಂದು ಪಾಲಿಟ್ ಬ್ಯೂರೋ ಹೇಳಿದೆ.

ಪರಿಸ್ಥಿತಿಯ ಈ ಆಯಾಮದ ಬಗ್ಗೆ ಕಾಂಗ್ರೆಸ್ ಪಕ್ಷದ ವಿ. ಪಿ. ಸಿಂಗ್-ವಿರೋಧ ಪ್ರಚಾರಕರು ಮತ್ತು ವಿ. ಪಿ. ಸಿಂಗ್ ಬೆಂಬಲಿಗರು ಇವರಿಬ್ಬರೂಕುರುಡಾಗಿದ್ದಾರೆ. ಚರ್ಚಾ ಸ್ಪರ್ಧೆಯಲ್ಲಿ ಪರಸ್ಪರ ಮೇಲುಗೈ ಪಡೆಯುವ ಅವರ ಪ್ರಯತ್ನದಲ್ಲಿ ಕಾಂಗ್ರೆಸ್‌ನ ಧೋರಣೆಗಳು (ಕೆಲವು ತಿಂಗಳ ಹಿಂದಿನವರೆಗೂ ವಿ. ಪಿ. ಸಿಂಗ್ ಕೂಡಾ ಇವುಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ದೇಶದ ಭದ್ರತೆಗೆ ಉಂಟು ಮಾಡಿರು ಅವರಿಗೆ ಹಾನಿ ಕಾಣುತ್ತಿಲ್ಲ.

○

ರಾಜೀವ್ ಉದ್ಧಟತನ ಪಿ. ಬಿ. ಖಂಡನೆ

ಸಿ.ಪಿ.ಐ. (ಎಂ) ನ ಪಾಲಿಟ್ ಬ್ಯೂರೋ ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರು ಲೋಕಸಭೆಯಲ್ಲಿ ನೀಡಿದ ಬಹುಮತವಿದ್ದರೂ "ರಾಷ್ಟ್ರ-ವಿರೋಧಿ" ರಾಜ್ಯ ಸರ್ಕಾರಗಳನ್ನು ವಜಾ ಮಾಡುವೆ ನೆಂಬ ಹೇಳಿಕೆಯನ್ನು ಪುನಃ ಸಮರ್ಥಿಸಿಕೊಂಡಿರುವುದನ್ನು ಖಂಡಿಸುತ್ತದೆ. ವಿರೋಧ ಪಕ್ಷಗಳ ನೇತೃತ್ವದಲ್ಲಿರುವ ರಾಜ್ಯ ಸರ್ಕಾರಗಳ ಬಗ್ಗೆ ಉದ್ಧಟತನದ ಮತ್ತು ಅಧಿಕಾರಶಾಹಿ ಧೋರಣೆ, ಜನಪ್ರಿಯತೆಯನ್ನು ಕಳೆದುಕೊಂಡು ಹತಾಶವಾಗಿರುವ ರಾಜೀವ ಸರಕಾರ ವಿರೋಧ ಪಕ್ಷಗಳನ್ನು ಎದುರಿಸಲು ಅಸಮರ್ಥವಾಗಿರುವುದನ್ನು ತೋರಿಸುತ್ತದೆ. ರಾಜ್ಯ ಸರ್ಕಾರಗಳನ್ನು ವಜಾ ಮಾಡುವ ಬೆದರಿಕೆ ಮತ್ತು ಕಾಂಗ್ರೆಯೇತರ ರಾಜ್ಯಗಳ ಪ್ರಜಾ ಸತ್ತಾತ್ಮಕ ಆಯ್ಕೆಯ ಬಗ್ಗೆ ತಿರಸ್ಕಾರಗಳನ್ನು ನೋಡಿದರೆ ಪ್ರಧಾನ ಮಂತ್ರಿಗಳು ರಾಜ್ಯಗಳು ಕೇಂದ್ರದ ತೊತ್ತು ಎಂದು ತಿಳಿದಂತಿದೆ. ವಿಚ್ಛಿದ್ರಕಾರಿ ಶಕ್ತಿಗಳು ದೇಶದ ಐಕ್ಯತೆಗೆ ಅಪಾಯ ವೊಡ್ಡಿರುವಾಗ ಈ ಧೋರಣೆ ದೇಶಕ್ಕೆ ಅಪಾಯಕಾರಿ ಯಾದದ್ದು.

ಪಾಲಿಟ್ ಬ್ಯೂರೋ ರಾಜ್ಯ ಸರಕಾರಗಳ ಹಕ್ಕು ಮತ್ತು ಅಧಿಕಾರಿಗಳನ್ನು ಕೇಂದ್ರ ಸರ್ಕಾರ ಉದ್ದೇಶಪೂರ್ವಕವಾಗಿ ಅತಿ ಕ್ರಮಿಸುತ್ತಿರುವುದನ್ನು ಖಂಡಿಸುತ್ತದೆ. ತ್ರಿಪುರಾದ ಚುನಾವಣೆಗಳನ್ನು ಘೋಷಿಸುವುದರಲ್ಲಿ ವಿಳಂಬ, ಒಂಬತ್ತನೇ ಆರ್ಥಿಕ ಆಯೋಗಕ್ಕೆ ಕೊಟ್ಟಿರುವ ಷರತ್ತುಗಳು, ಸರ್ಕಾರಿಯ ಕಮಿಶನ್ ವರದಿ ಬಿಡುಗಡೆ ಮಾಡದಿರುವುದು,-ಇವೆಲ್ಲಾ ಕಾಂಗ್ರೆ ಸರ್ಕಾರದ ಅಧಿಕಾರಶಾಹಿ ಧೋರಣೆಯ ಪ್ರತೀಕ.

ಪ್ರಧಾನ ಮಂತ್ರಿಗಳ ಸಂವಿಧಾನ-ವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಧೋರಣೆಗಳ ಮೇಲೆ ಆಧಾರಿತ ಕಾರ್ಯಾಚರಣೆಗೆ ಶಕ್ತಿಯುತವಾದ ಜನತೆಯ ಐಕ್ಯ ವಿರೋಧ ಎದುರಿಸಬೇಕಾಗುತ್ತದೆ ಎಂದು ಪಿ.ಬಿ. ಎಚ್ಚರಿಸುತ್ತದೆ.

ಜ. 11 ರಂದು ಬೀಡಿ ಕಾರ್ಮಿಕರ ಪ್ರತಿಭಟನಾ ಪ್ರದರ್ಶನ

ದಿನಾಂಕ 23-12-87 ರಂದು ಕುಂದಾಪುರದಲ್ಲಿಜರುಗಿದ ರಾಜ್ಯ ಸಮಿತಿಯು ಕಾರ್ಮಿಕರ ಭವಿಷ್ಯ ನಿಧಿಗೆ ಬೀಡಿ ಕಾರ್ಮಿಕರಿಂದ ಚಂದಾವಸೂಲಿ ಮಾಡಬೇಕೆಂದು 1977ನೇಯ ಇಸವಿಯಲ್ಲಿ ಸರ್ಕಾರದ ತೀರ್ಮಾನವಾಗಿದ್ದರೂ ಭವಿಷ್ಯ ನಿಧಿಯ ಇಲಾಖೆಯ ಅಧಿಕಾರಿಗಳ ಆಸಡ್ಡೆ ಮನೋಭಾವನೆಯಿಂದ ಹಾಗೂ ಆ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲದೇ ಇರುವ ಕಾರಣದಿಂದ ಅಸಂಖ್ಯಾತ ಬೀಡಿ ಕಾರ್ಮಿಕರಿಂದ ಭವಿಷ್ಯ ನಿಧಿಗೆ ಚಂದಾ ವಸೂಲಿ ಆಗದೇ ಇರುವ ಪರಿಸ್ಥಿಯನ್ನು ತೀವ್ರವಾಗಿ ಗಮನಿಸಿತು. ಸರ್ಕಾರದ ತೀರ್ಮಾನವನ್ನು ಕಾರ್ಯಗೊಳಿಸುವಂತೆ ಮಾಡಲು ಆಯಾ ಪ್ರದೇಶಗಳ ಭವಿಷ್ಯ ನಿಧಿಯ ಕಛೇರಿಗಳ ಮುಂದೆ ಜನವರಿ 11 ರಂದು ಬೀಡಿ ಕಾರ್ಮಿಕರ ಪ್ರತಿಭಟನಾ ಪ್ರದರ್ಶನ ಮಾಡಲು ಸಭೆ ತೀರ್ಮಾನಿಸಿತು.

ತಾವು ತಮ್ಮ ಪ್ರದೇಶದ ಭವಿಷ್ಯ ನಿಧಿಯ ಕಛೇರಿಯ ಮುಂದೆ ಅಂದು ಬೀಡಿ ಕಾರ್ಮಿಕರ ಪ್ರತಿಭಟನೆಯನ್ನು ಯಶಸ್ವಿಯಾಗಿ ನಡೆಸಿ ಸಂಬಂಧ ಪಟ್ಟ ಅಧಿಕಾರಿಗಳ ಮೇಲೆ ಒತ್ತಾಯ ತರಬೇಕೆಂದು ತೀರ್ಮಾನಿಸಲಾಗಿದೆ.

ಬೀಡಿ ಕಾರ್ಮಿಕರಿಗೆ 15ರೂಪಾಯಿ ದಿನಗೂಲಿ ಪಾಯಿಂಟ್ 5ಪೈಸೆ ತುಟ್ಟಿ ಭತ್ಯೆ ಶೇಕಡ 20 ರಷ್ಟು ಬೋನಸ್ ಕೊಡಬೇಕೆಂದು ಹಾಗೂ ಕಾರ್ಖಾನೆಗಳ ಮುಚ್ಚುವಿಕೆ ವಿರುದ್ಧ ಪ್ರತಿಭಟಿಸಲು ಜನವರಿ 21, ರಂದು ಬೀಡಿ ಕಾರ್ಮಿಕರ ಮೆರವಣಿಗೆ ಮತ್ತು ರಾಜ್ಯ ಸರ್ಕಾರದ ಕಛೇರಿಗಳ ಮುಂದೆ ಪ್ರದರ್ಶನ ನಡೆಸಬೇಕೆಂದುರಾಜ್ಯಸಮಿತಿಯು ತೀರ್ಮಾನಿಸಿತು.

ಮೇಲ್ಕಂಡ ತೀರ್ಮಾನಗಳನ್ನು ಜಾರಿಗೊಳಿಸಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಬೀಡಿ ಕಾರ್ಮಿಕರ ಸಮಾವೇಶಗಳನ್ನು ನಡೆಸಿ ಪ್ರಚಾರ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ನಡೆಸಬೇಕೆಂದು ಸಭೆಯು ತೀರ್ಮಾನಿಸಿತು ಎಂದು ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ದಸ್ತಗೀರ್ ತಿಳಿಸಿದ್ದಾರೆ.

ಮಂ. ಪ. ಕೆಲಸಗಾರರ ಸಭೆ

ಗುಲ್ಬರ್ಗಾ ಜಿಲ್ಲಾಮಂಡಲ ಪಂಚಾಯಿತಿ ಕೆಲಸಗಾರರ ಸಂಘದ ಸಭೆ ಡಿ. 22 ರಂದು ಗುರಲಿಂಗಪ್ಪ ದೇವಪೂರದ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಬಿಲ್ ಕಲೆಕ್ಟರ್, ಪಂಪ್ ಅಪರೇಟರ್, ಸಿಪಾಯಿ, ಕಸಗೂಡಿಸುವ ಕೆಲಸಗಾರರನ್ನೂ ಕೇವಲ 50 ರೂ. ಮಾಸಿಕ ವೇತನಕ್ಕೆ ದುಡಿಸಿಕೊಳ್ಳುತ್ತಿರುವ ನೀತಿಯನ್ನು ಖಂಡಿಸಿ ಕೆಲಸಗಾರರನ್ನು ಖಾಯಂಗೊಳಿಸಲು ಹಾಗೂ ಕನಿಷ್ಟ ವೇತನ ನಿಗಧಿ ಪಡಿಸಲು ಜಿಲ್ಲಾ ಪರಿಷತ್ ಹಾಗೂ ರಾಜ್ಯ ಸರ್ಕಾರವನ್ನೂ ಒತ್ತಾಯಿಸುವ ನಿರ್ಣಯವನ್ನೂ ಕೈಗೊಳ್ಳಲಾಯಿತು.

ಸಭೆಯಲ್ಲಿ ಜಿಲ್ಲಾ ಪರಿಷತ್ ಸದಸ್ಯರಾದ ಕಾ|| ಮಾರುತಿ ಮಾನ ಪಡೆ ಮುಖ್ಯ ಅತಿಥಿಗಳಾಗಿ ಬೇಡಿಕೆ ಕುರಿತು ಮಾತನಾಡಿದರು. ರೈತ ಸಂಘದ ಕಲ್ಲಪ್ಪ ಕಿರಣಗಿ, ಎಸ್. ಎಫ್. ಐ. ನ ಉಪಾಧ್ಯಕ್ಷ ಎಸ್. ವೈ. ಗುರುಶಾಂತ್ ಶುಭಕೋರಿ ಮಾತನಾಡಿದರು. ಜನವರಿ 28 ರಂದು ಜಿಲ್ಲಾ ಮಂಡಲ ಪಂಚಾಯಿತಿ ಕೆಲಸಗಾರರ ಸಮ್ಮೇಳನ ನಡೆಸಲು ತೀರ್ಮಾನಿಸಲಾಯಿತು.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone · 75331 UMA Printers B-53 Editor : P. Ramachandra Rao Managing Editor : N. K. Upadhyaya